# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 179 Issue: 179 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 17.01.2025 17.01.2025 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2







ಮೈಕ್ರೋ ನ್ಯೂಸ್


**ಹಂಪಿ ಟೈಮ್ಸ್**
**ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆ–8**

**ದಿನಾಂಕ: 17-01-2025**

ವಿಷಯ: ತೆರೆದ ಮತ್ತು ಮುಚ್ಚಿದ ಪತ್ರರಂಧ್ರದ ಅಂದವಾದ ಚಿತ್ರವನ್ನು ಬಿಡಿಸಿ ಭಾಗಗಳನ್ನು ಗುರುತಿಸಿ.

ಎ/4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ಬಳಸಿ ಚಿತ್ರ ಬಿಡಿಸಬೇಕು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಅತ್ಯುತ್ತಮ ಒಂದು ಚಿತ್ರವನ್ನು ವಿದ್ಯಾರ್ಥಿಯ ಹೆಸರು, ಫೋಟೊ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಶಾಲೆ ವಿಳಾಸದೊಂದಿಗೆ ವಾಟ್ಸಪ್‌ಗೆ ಕಳಿಹಿಸಲು ಮನವಿ.

10ನೇ ತರಗತಿ ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿ ಮತ್ತು ಸೆರವಿನೊಂದಿಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ವಾಟ್ಸಪ್ ನಂಬರ್‌ಗೆ ಕಳುಹಿಸಬಹುದು.

ವಾಟ್ಸ್‌ಪ್ ನಂ: 99726 03099

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
94486 33038


## ಜನವರಿ 18 ರಂದು ಜೆಸ್ಕಾಂ ಗ್ರಾಹಕರ ಸಂವಾದ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ಗ್ರಾಮೀಣ ಉಪವಿಭಾಗದ ಕಚೇರಿಯಲ್ಲಿ ಜೆಸ್ಕಾಂ ಗ್ರಾಹಕರ ಸಂವಾದ ಸಭೆಯನ್ನು ಜ.18 ರಂದು ಏರ್ಪಡಿಸಲಾಗಿದೆ ಎಂದು ಜೆಸ್ಕಾಂ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ಹೊಸಪೇಟೆ ತಾಲೂಕಿನ ವಿದ್ಯುತ್ ಗ್ರಾಹಕರು (ಹೊಸಪೇಟೆ ನಗರ ಹೊರತುಪಡಿಸಿ) ಸಭೆಯಲ್ಲಿ ಭಾಗವಹಿಸಿ ವಿದ್ಯುತ್ ಸಮಸ್ಯೆ ಇದ್ದಲ್ಲಿ ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹರಿಸಿಕೊಳ್ಳಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರ ಪ್ರವಾಸ

**ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ್ ಕೋಸಂಬೆಯವರು ಜನವರಿ 17 ರಂದು ಬೆಳಗ್ಗೆ 11 ರಿಂದ ಸಂಜೆ 4 ಗಂಟೆಯವರೆಗೆ ಶಾಲೆಯಲ್ಲಿದೆ ಶಿಕ್ಷಣದ ಜೊತೆ ರಕ್ಷಣೆ ಮತ್ತು ಮಕ್ಕಳಿಂದ ಅಹವಾಲು ಸ್ವೀಕಾರ ಹಾಗೂ ಸಂವಾದದಲ್ಲಿ ಭಾಗವಹಿಸಿ ವಿಜಯನಗರದಲ್ಲಿ ವಾಸ್ತವ್ಯ ಹೂಡುವರು.
ಜ.18 ರಂದು ಬೆಳಗ್ಗೆ 10 ರಿಂದ 1.30 ರವರೆಗೆ ಆರ್.ಟಿ.ಇ ಅನುಷ್ಠಾನ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಆಯೋಜಿಸಿರುವ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿ ಮಧ್ಯಾಹ್ನ 2 ರಿಂದ 4 ಗಂಟೆಯವರೆಗೆ ಶಿಕ್ಷಣ ಇಲಾಖೆ ಅಧಿಕಾರಿಗಳೊಂದಿಗೆ ಆರ್.ಟಿ.ಇ ಅನುಷ್ಠಾನ ಕುರಿತು ಸಮಾಲೋಚನೆ ನಡೆಸಿ ಭಾಲ್ಕಿಗೆ ಪ್ರಯಾಣ ಬೆಳೆಸುವರು.

ಎಪಿಎಂಸಿ ಅಧಿಕಾರಿಗಳ ಬೆವರಿಳಿಸಿದ ಉಪಲೋಕಾಯುಕ್ತರು | ಬಳ್ಳಾರಿ ವಿವಿಧೆಡೆ ಅನಿರೀಕ್ಷಿತ ಭೇಟಿ

# ಎಪಿಎಂಸಿಯಲ್ಲಿ ರೈತರಿಂದ ಕಮಿಷನ್ ವಸೂಲಿ ಅಕ್ರಮ

## ಕರ್ನಾಟಕ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅಧಿಕಾರಿಗಳಿಗೆ ಸೂಚನೆ



**ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು, ಗುರುವಾರದಂದು ಬಳ್ಳಾರಿಯ ವಿವಿಧೆಡೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಗರದ ಕೃಷಿ ಉತ್ಪನ್ನ ಮಾರುಕಟ್ಟೆ, ವೇಣಿ ವೀರಾಪುರ ಬಳಿಯ ಬೃಹತ್ ಘನ ತ್ಯಾಜ್ಯ ನಿರ್ವಹಣೆ ಘಟಕ, ಬಳ್ಳಾರಿ ಮಹಾನಗರ ಪಾಲಿಕೆ ಕಚೇರಿ ಮತ್ತು ಬಳ್ಳಾರಿ ತಾಲ್ಲೂಕು ತಹಶೀಲ್ದಾರರ ಕಚೇರಿಗೆ ಅನಿರೀಕ್ಷಿತವಾಗಿ ದಿಢೀರ್ ಭೇಟಿ ನೀಡಿ ಅಲ್ಲಿನ ಕಾರ್ಯ ವೈಖರಿ ಕುರಿತು ಪರಿಶೀಲಿಸಿದರು.

**ಕೃಷಿ ಉತ್ಪನ್ನ ಮಾರುಕಟ್ಟೆ(ಎಪಿಎಂಸಿ):**
ಮೊದಲಿಗೆ, ಗುರುವಾರ ಮುಂಜಾನೆ ನಗರದ ಕೃಷಿ ಉತ್ಪನ್ನ ಮಾರುಕಟ್ಟೆ(ಎಪಿಎಂಸಿ)ಗೆ ಭೇಟಿ ನೀಡಿದ ಅವರು, ಎಪಿಎಂಸಿಯಲ್ಲಿನ ವ್ಯಾಪಾರ ವಹಿವಾಟು, ಶೌಚಾಲಯ ಸೇರಿದಂತೆ ಮೂಲಭೂತ ಸೌಕರ್ಯಗಳ ಬಗ್ಗೆ ಪರಿಶೀಲನೆ ನಡೆಸಿದರು. ಶುಚಿತ್ವಕ್ಕೆ ಆದ್ಯತೆ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ರೈತರ ಸಮಸ್ಯೆಗಳ ಬಗ್ಗೆ ಆಲಿಸಿದ ಉಪಲೋಕಾಯುಕ್ತರು, ವರ್ತಕರು ಖರೀದಿ ಮಾಡಿದ ತರಕಾರಿ ರಸೀದಿ ನೀಡ್ತಾರೆಯೇ ಎಂಬುದರ ಬಗ್ಗೆ ಕೆಲ ವರ್ತಕರ ಮತ್ತು ರೈತರ ಬಳಿ ವ್ಯಾಪಾರದ ಮಾಹಿತಿ ಪಡೆದುಕೊಂಡರು.

ರೈತರಿಂದ ಕಮಿಷನ್ ವಸೂಲಿ ಮಾಡಲು ಎಪಿಎಂಸಿ ಕಾಯ್ದೆಯಲ್ಲಿ ಅವಕಾಶ ಇಲ್ಲ. ಖರೀದಿದಾರರಿಂದ ಕೇವಲ ರೂ.2 ಕಮಿಷನ್ ಪಡೆಯಬೇಕು ಎಂದು ಕಾನೂನು ಹೇಳುತ್ತದೆ. ಆದರೆ ಇಲ್ಲಿ ನೇರವಾಗಿ ರೈತರಿಂದಲೇ ರೂ.10 ವಸೂಲಿ ಮಾಡಲಾಗುತ್ತಿದೆ. ಇದು ಅಕ್ರಮ ಎಂದು ತಿಳಿಸಿದರು.

ವರ್ತಕರು ರೈತರಿಂದ ಉತ್ಪನ್ನಗಳನ್ನು ಖರೀದಿ ಮಾಡಿ ಹೆಚ್ಚುವರಿ ಕಮಿಷನ್‌ಗೆ ಮಾರಾಟ ಮಾಡುವುದಕ್ಕೆ ಕಡಿವಾಣ ಹಾಕಬೇಕು ಎಂದು ಎಪಿಎಂಸಿ ಅಧಿಕಾರಿಗಳಿಗೆ ಸೂಚಿಸಿದರು.

**ಬೃಹತ್ ಘನ ತ್ಯಾಜ್ಯ ನಿರ್ವಹಣೆ ಘಟಕ:***
ಬಳಿಕ ವೇಣಿ ವೀರಾಪುರ ಬಳಿಯ ಬೃಹತ್ ಘನ ತ್ಯಾಜ್ಯ ನಿರ್ವಹಣೆ ಘಟಕಕ್ಕೆ ಭೇಟಿ ನೀಡಿದ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು, ಅಲ್ಲಿನ ನಿರ್ವಹಣೆ ಕುರಿತು ಮಹಾನಗರ ಪಾಲಿಕೆ ಆಯುಕ್ತರಿಂದ ಮಾಹಿತಿ ಪಡೆದುಕೊಂಡರು.

84 ಎಕರೆ ವ್ಯಾಪ್ತಿಯಲ್ಲಿರುವ ಬೃಹತ್ ಘನ ತ್ಯಾಜ್ಯ ನಿರ್ವಹಣೆ ಘಟಕದಲ್ಲಿ ಸುಮಾರು 18 ವರ್ಷಗಳಿಂದ ಸರಿಯಾಗಿ >>3

## ಇಂದು ವಿಜಯನಗರದಲ್ಲಿ ಸಂಸದರ ನೂತನ ಕಚೇರಿ ಉದ್ಘಾಟನೆ

**ಹಂಪಿ ಟೈಮ್ಸ್ ಹೊಸಪೇಟೆ**



ಬಳ್ಳಾರಿ–ವಿಜಯನಗರ ಸಂಸದ ಈ.ತುಕಾರಾಮ್ ಸಾರ್ವಜನಿಕರನ್ನು ಭೇಟಿಯಾಗಿ, ಕುಂದುಕೊರತೆ ಆಲಿಸಿ, ಅಹವಾಲು ಸ್ವೀಕಾರಕ್ಕಾಗಿ ವಿಜಯನಗರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಂಸದರ ನೂತನ ಕಚೇರಿಯನ್ನು ತೆರೆಯಲಾಗಿದ್ದು, ಇದರ ಉದ್ಘಾಟನೆಯನ್ನು ಜನವರಿ 17 ರಂದು ಬೆಳಗ್ಗೆ 10.30 ಕ್ಕೆ ಸಂಸದರು ನೆರವೇರಿಸುವರು. ಅಧಿಕಾರಿಗಳು, ಪಕ್ಷದ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿರಲಿದ್ದಾರೆ.

## ಆಸ್ತಿ ತೆರಿಗೆ, ನೀರಿನ ಶುಲ್ಕ ವಸೂಲಾತಿಗೆ ಆಸಕ್ತರಿಂದ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೂವಿನಹಡಗಲಿ**

ವಿಜಯನಗರ ಜಿಲ್ಲೆಯ ಹೂವಿನಹಡಗಲಿ ಪುರಸಭೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ಸಮರ್ಪಕವಾಗಿ ವಸೂಲಾತಿ ಮಾಡಲು ಅರ್ಹ ಮಹಿಳಾ ಸ್ವಸಹಾಯ ಸಂಘಗಳ ಸದಸ್ಯರಿಗೆ ಅರ್ಜಿ ಅಹ್ವಾನಿಸಲಾಗಿದೆ ಎಂದು ಹೂವಿನಹಡಗಲಿ ಪುರಸಭೆ ಮುಖ್ಯಾಧಿಕಾರಿ ತಿಳಿಸಿದ್ದಾರೆ.

ಹೂವಿನ ಹಡಗಲಿ ಪುರಸಭೆ ಡೇ–ನಲ್ಮ್ ಅಭಿಯಾನದಡಿಯಲ್ಲಿ ರಚಿಸಲಾಗಿರುವ ಅರ್ಹ ಮಹಿಳಾ ಸ್ವಸಹಾಯ ಸಂಘಗಳನ್ನು ತೊಡಗಿಕೊಂಡು ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ವಸೂಲಾತಿ, ಸಂಗ್ರಹಣೆ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಈ ಕಾರ್ಯಕ್ರಮದಡಿಯಲ್ಲಿ ಡೇ–ನಲ್ಮ್ ಯೋಜನೆಯಡಿಯಲ್ಲಿ ರಚಿಸಲಾಗಿರುವ ಉಳಿತಾಯ ಗುಂಪುಗಳಲ್ಲಿನ ಕನಿಷ್ಟ 7ನೇ ತರಗತಿಯವರೆಗೆ ಶಿಕ್ಷಣವನ್ನು ಹಾಗೂ ಎಲೆಕ್ಟ್ರಾನಿಕ್ಸ್ ಪರಿಕರಗಳನ್ನು ಬಳಸುವ ಸಾಮರ್ಥ್ಯವನ್ನು ಹೊಂದಿರಬೇಕು. ಆದ್ಯತೆ ಮೇರೆಗೆ ಹೆಚ್ಚಿನ ವಿದ್ಯಾಭ್ಯಾಸ ಪಡೆದಂತವರಿಗೆ ಆದ್ಯತೆ ನೀಡಲಾಗುವುದು. ಇಚ್ಛೆಯುಳ್ಳವಂತಹ ಪುರಸಭೆ ಕಾರ್ಯಾಲಯದ ವ್ಯಾಪ್ತಿಯೊಳಗೆ ಬರುವ ಮಹಿಳಾ ಸ್ವಸಹಾಯ ಸಂಘದ ಸದಸ್ಯರುಗಳು ಫೆ.12 ರೊಳಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಪುರಸಭೆ ಕಾರ್ಯಾಲಯದ ಡೇ–ನಲ್ಮ್ ಶಾಖೆಗೆ ಸಂಪರ್ಕಿಸಲು ತಿಳಿಸಿದ್ದಾರೆ

## 200 ಜನ ಬಾಣಸಿಗರಿಂದ ಮಿರ್ಚಿ ತಯಾರಿಕೆ ಮಿರ್ಚಿ ರುಚಿ ಸವಿದ 3 ಲಕ್ಷ ಭಕ್ತರು



**ಹಂಪಿ ಟೈಮ್ಸ್ ಕೊಪ್ಪಳ**

ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವದ ಪ್ರತಿ ವರ್ಷದಂತೆ ಜಾತ್ರಾ ಮಹಾದಾಸೋಹದಲ್ಲಿ ಈ ವರ್ಷವೂ ಜಾತ್ರಾ ಮಹೋತ್ಸವದ ಎರಡನೇ ದಿನವಾದ ಗುರುವಾರದಂದು ಉತ್ತರ ಕರ್ನಾಟಕದ ವಿಶೇಷ ಖಾದ್ಯವಾದ ಮಿರ್ಚಿ ಜಾತ್ರೆಗೆ ಆಗಮಿಸಿದ ಭಕ್ತರಿಗೆ ವಿತರಿಸಲಾಯಿತು.

ಮಿರ್ಚಿ ತಯಾರಿಕೆಗೆ 30 ಕ್ವಿಂಟಾಲ್ ಹಿಟ್ಟು, 20 ಬ್ಯಾರಲ್ ಎಣ್ಣೆ, 28 ಕ್ವಿಂಟಾಲ್ ಮೆಣಸಿನಕಾಯಿ, 1 ಕ್ವಿಂಟಾಲ್ ಅಜಿವಾನ, 1ಕ್ವಿಂಟಾಲ್ ಸಣ್ಣ ಉಪ್ಪು, 50




ಕೆ.ಜಿ.ಸೊಡಾಪುಡಿ ಬಳಸಲಾಗಿದೆ. ಮಿರ್ಚಿ ತಯಾರಿಕೆಗೆ ಐವತ್ತು ಜನರ ನಾಲ್ಕು ತಂಡದಂತೆ ಒಟ್ಟು 200 ಜನ ಬಾಣಸಿಗರು ಹಾಗೂ ಅವರಿಗೆ 150 ಜನ ಸಹಾಯ ಮಾಡುವುದರ ಮೂಲಕ ಮಿರ್ಚಿ ತಯಾರಿಕೆಯ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಮಿರ್ಚಿ ವಿವಿಧ ಗ್ರಾಮದ ಬಾಣಸಿಗರು ಆಗಮಿಸಿ ಸೇವೆಗೈದರು. ಸುಮಾರು ಮೂರು ಲಕ್ಷ ಜನರು ಮಿರ್ಚಿಯನ್ನು ಸವಿದಿದ್ದಾರೆ ಎಂದು ಶ್ರೀಗವಿಮಠ ತಿಳಿಸಿದೆ.

# ಆಕಸ್ಮಿಕ ಬೆಂಕಿ: ಕೆನ್ನಾಲಿಗೆಗೆ ರಾಗಿ ಬಣವಿ ಭಸ್ಮ



**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ನೆಲಬೊಮ್ಮನಹಳ್ಳಿ ಗ್ರಾಮದ ಹನುಮಂತಪ್ಪ ತಂದೆ ದಂಡೆಪ್ಪ ಇವರಿಗೆ ಸೇರಿದ 30,000ರೂ. ಅಂದಾಜು ಮೌಲ್ಯದ ರಾಗಿ ಬಣವಿ ಬುಧವಾರ ತಡರಾತ್ರಿ ಬೆಂಕಿಗೆ ಅಹುತಿಯಾಗಿರುವ ದುರ್ಘಟನೆ ಜರುಗಿದೆ. ಹನುಮಂತಪ್ಪ ತನ್ನ ಸ್ನೇಹಿತರೊಂದಿಗೆ ನೆರೆಯ ಗ್ರಾಮ ಜುಮ್ಮೋಬನಹಳ್ಳಿ ಜಾತ್ರೆಗೆ ಹೋಗಿದ್ದರು ಎಂದು ತಿಳಿದುಬಂದಿದೆ. ಗ್ರಾಮಕ್ಕೆ ಬಂದಾಗ ಕಣದಲ್ಲಿರುವ ರಾಗಿ ಬಣವಿ ಬೆಂಕಿ ಕೆನ್ನಾಲಿಗೆಯೊಂದಿಗೆ ಧಗ, ಧಗಿಸಿ ಉರಿಯುತ್ತಿರುವುದನ್ನು ನೋಡಿ ಕಂಗಾಲಾಗಿ ಹೋಗಿದ್ದಾನೆ. ತಕ್ಷಣವೇ ಅಗ್ನಿಶಾಮಕ ಸಿಬ್ಬಂದಿಗೆ ತಿಳಿಸಿದ್ದಾರೆ. ಅಗ್ನಿಶಾಮಕ ದಳದವರು ಬಂದು ಬೆಂಕಿ ನಂದಿಸಿದರು. ರಾಗಿ ಬಣವಿ ಸಂಪೂರ್ಣ ಭಸ್ಮವಾಗಿದ್ದು, ಸರ್ಕಾರದ ಪರಿಹಾರಕ್ಕಾಗಿ ರೈತ ಹನುಮಂತಪ್ಪ ಕೋರಿದ್ದಾರೆ

ಹಂಪಿ ಟೈಮ್ಸ್ HAMPI TIMES

## ಸ್ಟುಡೆಂಟ್ ಕಾಲಂ

# ಅತಿ ಆಸೆ ಗತಿಗೇಡು

ಕೃಷ್ಣಾಪುರ ಎಂಬ ಗ್ರಾಮದಲ್ಲಿ ಮನೋಜ ಎಂಬ ಹುಡುಗ ಇದ್ದ. ಅವನು ಒಬ್ಬ ಕುರಿ ಕಾಯುವ ಹುಡುಗ ಆಗಿದ್ದ. ಅವನು ಒಂದು ನಾಯಿಯನ್ನು ಸಾಕಿದ್ದ. ಆ ನಾಯಿ ದಿನಾಲು ಅವನ ಜೊತೆಗೆ ಇರುತ್ತಿತ್ತು. ಒಂದು ದಿನ ಅವನು ಊರಿನ ಪಕ್ಕದಲ್ಲಿದ್ದ ಕಾಡಿಗೆ ಕುರಿಮೇಯಿಸಲು ಹೋಗಿದ್ದ. ಅಲ್ಲಿಗೆ ತನ್ನ ನಾಯಿಯನ್ನು ಸಹ ಕರೆದುಕೊಂಡು ಹೋಗಿದ್ದ. ಆ ಕಾಡಿನಲ್ಲಿ ಕಾಡು ಜನಗಳ ಗುಂಪೊಂದಿತ್ತು. ಆ ಜನಗಳು ತಮ್ಮ ಪೂರ್ವಜರು ಸಂಗ್ರಹಿಸಿದ್ದ ಚಿನ್ನವನ್ನು ಒಂದು ಡಬ್ಬದಲ್ಲಿ ಹಾಕಿ ತಾವು ಇದ್ದ ಜಾಗದಲ್ಲಿ ಹೂತಿಟ್ಟಿದ್ದರು.



ಮನೋಜನು ಆ ಕಾಡಿನಲ್ಲಿ ಸುತ್ತಾಡುತ್ತಾ ಕುರಿಗಳನ್ನು ಮೇಯಿಸುತ್ತಿದ್ದನು. ಅವನ ನಾಯಿ ನೆಲವನ್ನು ಮೂಸುತ್ತ ಮುಂದಕ್ಕೆ ಹೋಗುತ್ತಿತ್ತು. ನಾಯಿ ನೆಲವನ್ನು ಮೂಸುತ್ತ ಮುಂದೆ ಮುಂದೆ ಹೋಗುತ್ತಿದ್ದದನ್ನು ಕಂಡು ಅವನು ಅದರ ಹಿಂದೆ ಹಿಂದೆ ಹೋದ. ಅದು ಆ ಕಾಡು ಜನಗಳಿದ್ದ ಜಾಗಕ್ಕೆ ಬಂತು. ಆಗ ಆ ಕಾಡು ಜನಗಳು ಬೇರೆ ಕಾಡಿಗೆ ಔಷಧ ಸಸ್ಯಗಳನ್ನು ತರಲು ಹೋಗಿದ್ದರು. ಆಗ ಮನೋಜನ ನಾಯಿ ಆ ಕಾಡು ಜನಗಳು ಚಿನ್ನ ಹೂತಿಟ್ಟಿದ್ದ ಜಾಗವನ್ನು ಅಗೆಯಲು ಆರಂಭಿಸಿತು. ಮನೋಜನಿಗೆ ಅದು ಕಾಡು ಜನಗಳ ಜಾಗ ಎಂದು ಗೊತ್ತಿರಲಿಲ್ಲ. ಅವನ ನಾಯಿ ನೆಲವನ್ನು ಅಗೆಯುತ್ತಿರುವುದನ್ನು ನೋಡಿ ಅವನಿಗೆ ಅನುಮಾನ ಬಂದಿತು. ಅವನು ಆ ನಾಯಿಯ ಜೊತೆಗೆ ಅಗೆಯಲು ಶುರು ಮಾಡಿದ. ಆಗ ಅವನಿಗೆ ಕಾಡು ಜನಗಳು ಹೂತಿಟ್ಟಿದ್ದ ಡಬ್ಬ ಸಿಕ್ಕಿತು. ಅವನು ಆ ಡಬ್ಬವನ್ನು ತೆರೆದು ನೋಡಿದ. ಆಶ್ಚರ್ಯವಾಯಿತು. ಆ ಡಬ್ಬದಲ್ಲಿ ಚಿನ್ನ ಇತ್ತು. ಅವನು ಚಿನ್ನವನ್ನು ನೋಡಿ ಇದು ಕನಸೊ! ನನಸೋ! ಎಂದು ಚೂಟಿಕೊಂಡ. ಚೂಟಿಕೊಂಡಾಗ ಇದು ಕನಸಲ್ಲ ನನಸು ಎಂದು ಗೊತ್ತಾಯಿತು.

ಚಿನ್ನ ಸಿಕ್ಕ ಖುಷಿಯಲ್ಲಿ ಅವನು ಆ ಚಿನ್ನ ಯಾರದು ಎಂದು ವಿಚಾರಿಸದೆ ತನ್ನ ಊರಿಗೆ ಹೊರಟ. ಕಾಡು ಜನರು ವಾಪಸ್ಸು ಬಂದಾಗ ಅವರಿಗೆ ಆಶ್ಚರ್ಯವಾಗುತ್ತದೆ. ಅವರ ತಾವು ಹೂತಿಟ್ಟಿದ್ದ ಚಿನ್ನ ಕಳ್ಳತನವಾಗಿರುವುದು ಗೊತ್ತಾಗಿ ಅವರಿಗೆ ಸಿಟ್ಟು ಬಂತು. ಇದೇ ರೀತಿ ಇನ್ನೊಂದು ದಿನ ಮನೋಜ ಚಿನ್ನ ಸಿಕ್ಕ ಜಾಗಕ್ಕೆ ತನ್ನ ನಾಯಿಯ ಜೊತೆ ಹೋಗುತ್ತಾನೆ. ಆ ಕಾಡು ಜನರು ತಮ್ಮ ಚಿನ್ನ ಕಳ್ಳತನವಾಗಿರುವುದರಿಂದ ಅವರು ತಮ್ಮ ಜಾಗಕ್ಕೆ ಯಾರೇ ಬಂದರು ಸಾಯಿಸಿಬಿಡುತ್ತಿದ್ದರು. ಮನೋಜನು ಕಾಡು ಜನರನ್ನು ನೋಡಿ ಓಡಿ ಹೋಗಲು ಪ್ರಯತ್ನಿಸುತ್ತಾನೆ. ಅವನ ನಾಯಿ ಕಾಡು ಜನರನ್ನು ನೋಡಿ ಬೊಗಳಲು ಆರಂಭಿಸಿತು.

ಅವರಿಗೆ ನಾಯಿ ಬೊಗಳುವ ಶಬ್ದ ಕೇಳಿ ಇಲ್ಲಿ ಯಾರೋ ಇದ್ದಾರೆ ಅಂತ ಅವರಿಗೆ ಗೊತ್ತಾಗುತ್ತದೆ. ಅವರಿಗೆ ಮನೋಜನು ಕಾಣುತ್ತಾನೆ. ಕಾಡು ಜನರು ಇವನೇ ನಮ್ಮ ಚಿನ್ನ ಕದ್ದಿರಬಹುದು, ಇವನನ್ನು ಹಿಡಿಯಿರಿ ಎಂದು ಗುಂಪಲ್ಲಿದ್ದ ಒಬ್ಬ ಮನುಷ್ಯ ಹೇಳುತ್ತಾನೆ. ಆಗ ಮನೋಜನನ್ನು ಹಿಡಿಕೊಳ್ಳುತ್ತಾರೆ. ಮನೋಜನನ್ನು ನೀನೆ ನಮ್ಮ ಚಿನ್ನ ಕದ್ದಿರುವುದು ನಮ್ಮ ಚಿನ್ನವನ್ನು ವಾಪಸ್ಸು ಕೊಡು ಇಲ್ಲದಿದ್ದರೆ ನಿನ್ನನ್ನು ಬಾಕುಯಿಂದ ಚುಚ್ಚಿ ಸಾಯಿಸುತ್ತೇವೆ ಎಂದು ಹೇಳುತ್ತಾರೆ. ಅವನಿಗೆ ಭಯವಾಗುತ್ತದೆ. ಅವರಿಗೆ ಚಿನ್ನವನ್ನು ಕೊಡದಿದ್ದರೆ ನನ್ನನ್ನು ಸಾಯಿಸುತ್ತಾರೆ ಅಂತ ಮನಸ್ಸಲ್ಲೇ ಅಂದುಕೊಳ್ಳುತ್ತಾನೆ. ಮನೋಜನು 'ನಾನು ನಿಮ್ಮ ಚಿನ್ನವನ್ನು ವಾಪಸ್ಸು ಕೊಡುತ್ತೇನೆ' ಎನ್ನುತ್ತಾನೆ. 'ನಿಮ್ಮ ಚಿನ್ನ ಊರಲ್ಲಿದೆ. ಊರಿಗೆ ಹೋಗಿ ತರುತ್ತೇನೆ' ಎನ್ನುತ್ತಾನೆ. ಕಾಡು ಜನರು 'ನೀನು ಚಿನ್ನವನ್ನು ತರಲು ಊರಿಗೆ ಹೋದರೆ, ವಾಪಸ್ಸು ಬರುವುದಿಲ್ಲ' ಎಂದು ಹೇಳುತ್ತಾರೆ. ಅವನೊಂದಿಗೆ ಕೆಲವು ಕಾಡಿನ ಜನರನ್ನು ಕಳಿಸುತ್ತಾರೆ.

ಅವರನ್ನು ಮನೆಗೆ ಕರೆದುಕೊಂಡು ಹೋಗಿ ಮನೆಯ ಹೊರಗಡೆ ಅವರನ್ನು ನಿಲ್ಲಿಸಿ, ಒಳಗೆ ಹೋಗುತ್ತಾನೆ. ತಾನು ತಂದಿದ್ದ ಚಿನ್ನದಲ್ಲಿ ಅರ್ಧ ಚಿನ್ನವನ್ನು ಅವರಿಗೆ ಕೊಡುತ್ತಾನೆ. ಇನ್ನರ್ಧ ಚಿನ್ನವನ್ನು ತನ್ನ ಹತ್ತಿರ ಉಳಿಸಿಕೊಳ್ಳುತ್ತಾನೆ. ಕಾಡು ಜನರು ಅವರ ಚಿನ್ನದಲ್ಲಿ ಕಡಿಮೆ ಇದೆ ಎಂದು ಹೇಳುತ್ತಾರೆ. ಮನೋಜ ಇಲ್ಲ ನಾನು ಇಷ್ಟೇ ಚಿನ್ನ ತಗೊಂಡಿದ್ದೆ ನನ್ನನ್ನು ಬಿಟ್ಟು ಬಿಡಿ ಎಂದು ಹೇಳುತ್ತಾನೆ. ಕಾಡು ಜನರಿಗೆ ಅನುಮಾನ ಬರುತ್ತದೆ. ಅವರು ಮನೋಜನನ್ನು ಸಾಯಿಸಿ ಅವನ ಮನೆಯಲ್ಲಿದ್ದ ಚಿನ್ನವನ್ನೆಲ್ಲ ತಗೊಂಡು ತಾವು ಇದ್ದ ಕಾಡಿಗೆ ಹೋಗುತ್ತಾರೆ

– **ಡಿ. ಕಾರ್ತಿಕ 8ನೇತರಗತಿ** ಸರ್ಕಾರಿ ಪ್ರೌಢಶಾಲೆ ಬಸರಕೋಡು, ಹಗರಿಬೊಮ್ಮನಹಳ್ಳಿ(ತಾ) ವಿಜಯನಗರ(ಜಿ)

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

**ಹೊಳಗುಂದಿ ಪಂಚಲಿಂಗುಗಳ ಗ್ರಾಮ ಎಂಬ ಅಭಿದಾನಕ್ಕೆ ಪಾತ್ರವಾಗಿದೆ. ಈ ಗ್ರಾಮದಲ್ಲಿ ಸಿದ್ದೇಶ್ವರ, ಸೋಮೇಶ್ವರ, ಬಳ್ಳೇಶ್ವರ, ಕಲ್ಲೇಶ್ವರ ಹಾಗೂ ಬಿಲ್ಲೇಶ್ವರ ಎಂಬ ಐದು ಲಿಂಗುಗಳ ದೇವಸ್ಥಾನಗಳಿವೆ. ನೋಡ ಬನ್ನಿ ಜ.17 ರಂದು ರಥೋತ್ಸವ, ಜ.18ರಂದು ಅಗ್ನಿ**

# ಹೊಳಗುಂದಿಯ ಆರಾಧ್ಯದೈವ ಸಿದ್ದೇಶ್ವರ ರಥೋತ್ಸವ

ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಹೊಳಗುಂದಿ ಗ್ರಾಮವು ಜಿಲ್ಲೆಯಲ್ಲಿ ಒಂದು ವಿಶಿಷ್ಠ ಹೆಗ್ಗುರುತನ್ನು ಮೂಡಿಸಿದೆ. ಹೊಳಗುಂದಿಯು ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಐತಿಹಾಸಿಕವಾಗಿ, ಪ್ರಾಕೃತಿಕವಾಗಿ ಸಾಕಷ್ಟು ಪ್ರಸಿದ್ಧಿ ಪಡೆದಿದೆ. ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಗ್ರಾಮದಲ್ಲಿ ಸಂಪ್ರದಾಯ, ಸಂಸ್ಕೃತಿಗಳು ಮನೆ ಮಾಡಿವೆ. ಶಾಸನಗಳಲ್ಲಿ 'ಪೊಳಲ್ಗುಂದೆ' ಎಂದು ಉಲ್ಲೇಖಿತವಾದ ಈ ಗ್ರಾಮವು ಅಗ್ರಹಾರ ವಾಗಿತ್ತೆಂಬುದು ಶಾಸನಗಳಿಂದ ತಿಳಿದು ಬರುತ್ತದೆ. 'ಪೊಳಲ್ಗುಂದೆ'ಯು ಕಾಲಾನಂತರದಲ್ಲಿ 'ಹೊಳಲ್ಗುಂದೆ', 'ಹೊಳಲುಗುಂದಿ' ನಂತರ ಹೊಳಗುಂದಿ ಎಂದು ಬದಲಾಗಿದೆ. ಪೊಳಲ್ ಎಂದರೆ ಪಟ್ಟಣ, ಗುಂದೆ ಎಂದರೆ ಗುಡ್ಡ/ಬೆಟ್ಟಗಳ ಪಕ್ಕದ ಗ್ರಾಮ. ಪೊಳಲ್ಗುಂದೆ (ಪೊಳಲ್+ಗುಂದೆ) ಎಂಬುದು ಆಗಿನ ಕಾಲದ ಪ್ರಮುಖ ವ್ಯಾಪಾರ ಕೇಂದ್ರವೂ, ಪಟ್ಟಣವೂ ಆಗಿತ್ತು ಎಂಬುದು ಅನೇಕ ಶಾಸನಗಳಿಂದ ತಿಳಿದು ಬಂದಿದೆ. 'ಪ'ಕಾರಕ್ಕೆ 'ಹ'ಕಾರ ಸೇರಿ ಪೊಳಲ್ಗುಂದಿಯು ಹೊಳಗುಂದಿಯಾಗಿದೆ.

ಹೊಳಗುಂದಿಯ ಹೆಸರಿನ ಕುರಿತು ಜನಪದೀಯ ಪುರಾವೆಗಳೂ ಇವೆ. ಹೊಳಗುಂದಿಯು ವೀರಾಪುರ, ಸಿದ್ದಾಪುರ, ಬೈರಾಪುರ, ಗಿರಿಯಾಪುರ, ಸೋಮಾಪುರ, ಅರಕೇರಿ ಹಾಗೂ ಅಗಸನಕಟ್ಟೆ ಎಂಬ ಏಳು ಹಳ್ಳಿಗಳನ್ನು ಹೊಂದಿತ್ತು ಎಂಬುದು ಜನಪದೀಯ ಕಥೆ. ಈ ಏಳು ಹಳ್ಳಿಗಳು ಸೇರಿ ಹೊಳಗುಂದಿ ಆಗಿದೆ. ಇದಕ್ಕೆ ಪುರಾವೆಗಳೆಂಬಂತೆ ಈ ಎಲ್ಲಾ ಸ್ಥಳಗಳು ಗ್ರಾಮದ ಗಡಿಗಳಾಗಿದ್ದು, ಅಲ್ಲಿ ಆಂಜನೇಯ ದೇವಸ್ಥಾನಗಳು, ನೀರಿನ ಹೊಂಡಗಳು ಈಗಲೂ ಇವೆ. ಅಲ್ಲದೇ ಅಲ್ಲಿ ಮನೆಗಳಿದ್ದ ಕುರುಹುಗಳಿದ್ದವು. ಆದರೆ ಇತ್ತೀಚೆಗೆ ಭೂಒತ್ತುವರಿಯಿಂದ ಈ ಪ್ರದೇಶಗಳು ಸಂಪೂರ್ಣವಾಗಿ ನಾಶ ಹೊಂದಿವೆ. ಹೀಗೆ ಐತಿಹಾಸಿಕ ಹಾಗೂ ಸಾಂಸ್ಕೃತಿಯಿಂದ ಸಂಪದ್ಭರಿತವಾದ ಹೊಳಗುಂದಿಯಲ್ಲಿ ಹಲವಾರು ಮಹತ್ವದ ದೇವಸ್ಥಾನಗಳಿವೆ. ಅದರಲ್ಲೂ ಮುಖ್ಯವಾಗಿ ಇದು ಪಂಚಲಿಂಗುಗಳ ಗ್ರಾಮ ಎಂಬ ಅಭಿದಾನಕ್ಕೆ ಪಾತ್ರವಾಗಿದೆ. ಹೊಳಗುಂದಿಯಲ್ಲಿ ಸಿದ್ದೇಶ್ವರ, ಸೋಮೇಶ್ವರ, ಬಳ್ಳೇಶ್ವರ, ಕಲ್ಲೇಶ್ವರ ಹಾಗೂ ಬಿಲ್ಲೇಶ್ವರ ಎಂಬ ಐದು ಲಿಂಗುಗಳ ದೇವಸ್ಥಾನಗಳಿವೆ. ಸೋಮೇಶ್ವರ ಮತ್ತು ಬಳ್ಳೇಶ್ವರ ದೇವಸ್ಥಾನಗಳು ಐತಿಹಾಸಿಕ ದೇವಸ್ಥಾನಗಳಾಗಿವೆ. ಈ ಎರಡೂ ದೇವಸ್ಥಾನಗಳಲ್ಲಿ ಶಿಲಾ ಶಾಸನಗಳಿವೆ. ಈ ಶಾಸನಗಳು ಗ್ರಾಮದ ಇತಿಹಾಸವನ್ನು ತಿಳಿಸುತ್ತವೆ. ಕಲ್ಲೇಶ್ವರ ಮತ್ತು ಬಿಲ್ಲೇಶ್ವರ ದೇವಾಲಯಗಳು ಚಿಕ್ಕದಾಗಿದ್ದು, ತನ್ನದೇ ಆದ ಮಹತ್ವ ಹೊಂದಿವೆ.


ಇವೆಲ್ಲವುಗಳಿಗಿಂತ ಸಿದ್ದೇಶ್ವರ ದೇವಾಲಯವು ಹೊಳಗುಂದಿಯ ಪ್ರಮುಖ ಆಕರ್ಷಣೆಯ ಬಿಂಧುವಾಗಿದೆ. ಸಿದ್ದೇಶ್ವರ ದೇವಸ್ಥಾನವು ಗ್ರಾಮದ ಪಶ್ಚಿಮಕ್ಕಿರುವ ಬೆಟ್ಟದ ಬುಡದಲ್ಲಿ ನಿರ್ಮಾಣವಾಗಿದೆ. ಇಲ್ಲಿನ ಬೆಟ್ಟವು ಸಿದ್ದರಬೆಟ್ಟ ಎಂದು ಪ್ರಸಿದ್ಧಿಯಾಗಿದೆ. ಇದು ಗ್ರಾಮದ ಅಧಿದೇವರಾದ ಸಿದ್ದೇಶ್ವರನ ದೇವಸ್ಥಾನವಾಗಿದ್ದು, ಬಳ್ಳೇಶ್ವರ ಹಾಗೂ ಸೋಮೇಶ್ವರ ದೇವಸ್ಥಾನಗಳಂತೆ ಐತಿಹಾಸಿಕ ಉಲ್ಲೇಖವಿಲ್ಲ. ಆದರೆ ಈ ದೇವಸ್ಥಾನಕ್ಕೆ ಜನಪದೀಯ ಹಿನ್ನಲೆ ಗಟ್ಟಿಯಾಗಿದೆ. ಸುಮಾರು 250–300 ವರ್ಷಗಳ ಹಿಂದಿನಿಂದಲೂ ಇಲ್ಲಿ ದೇವಸ್ಥಾನ ಇರುವುದಾಗಿ ಪ್ರತೀತಿ ಇದೆ.

ಉತ್ತರ ಭಾರತದ ಉಜ್ಜೈಯಿನಿಯಲ್ಲಿ ವಾಸವಾಗಿದ್ದ ಉಜ್ಜೈಯಿನಿ ಮಹಾಸ್ವಾಮಿಗಳು ಲೋಕ ಕಲ್ಯಾಣ ಹಾಗೂ ಭಕ್ತರ ಕಲ್ಯಾಣಕ್ಕಾಗಿ ತಮ್ಮ ಮಠವನ್ನು ಉತ್ತರ ಭಾರತದಿಂದ ದಕ್ಷಿಣ ಭಾರತದಲ್ಲಿ ಸ್ಥಾಪಿಸುವ ಇಚ್ಛೆಯಿಂದ ದಕ್ಷಿಣ ಭಾರತಕ್ಕೆ ಪ್ರವಾಸ ಹೊರಡುತ್ತಾರೆ. ಮಠ ನಿರ್ಮಾಣಕ್ಕೆ ಸೂಕ್ತ ಸ್ಥಳ ಹುಡುಕುತ್ತಾ ದಕ್ಷಿಣದ ಕಡೆಗೆ ಆಗಮಿಸುತ್ತಾರೆ. ಹೀಗೆ ಸ್ಥಳ ಹುಡುಕುತ್ತಾ ಬರುವಾಗ ಹೊಳಗುಂದಿಗೆ ಆಗಮಿಸುತ್ತಾರೆ. ಗ್ರಾಮದ ಪಶ್ಚಿಮಕ್ಕೆ ಇರುವ ಕಲ್ಲುಗುಡ್ಡದ ಬುಡದಲ್ಲಿ ರಾತ್ರಿವೇಳೆ ತಂಗುತ್ತಾರೆ. ಪ್ರಶಾಂತವಾದ ಈ ಗುಡ್ಡದಲ್ಲಿ ರಾತ್ರಿ ಸುಖ ನಿದ್ರೆಯ ನಂತರ, ಇಲ್ಲಿನ ಕಲ್ಲುಗುಡ್ಡ ತಪೋನಿಧಿಗಳಿಗೆ ಉತ್ತಮ ತಾಣ ವೆಂಬುದು ಅವರ ಅರಿವಿಗೆ ಬರುತ್ತದೆ. ಇಷ್ಟಾರ್ಥಗಳನ್ನು ಸಿದ್ದಿಸಿ ಕೊಳ್ಳಲು ತಪ್ಪಸ್ಸು ಮಾಡು ವವರಿಗೆ ಸೂಕ್ತ ಸ್ಥಳ ಇದು ಎಂಬುದು ಗಮನಕ್ಕೆ ಬಂದ ಕೂಡಲೇ ಇದಕ್ಕೆ ಸಿದ್ದರ ಬೆಟ್ಟ ಎಂದು ನಾಮಕರಣ ಮಾಡುತ್ತಾ, ಇಲ್ಲಿಯೇ ಮಠ ನಿರ್ಮಾಣ ಮಾಡಲು ಇಚ್ಛಿಸುತ್ತಾರೆ. ಇದನ್ನು ಆಗಿನ ಜನರಿಗೆ ತಿಳಿಸುತ್ತಾರೆ. ಹೇಳಿಕೇಳಿ ಇದೊಂದು ಕಲ್ಲುಗುಡ್ಡ. ಇದು ಹುಲಿ, ಚಿರತೆ, ಕರಡಿ ಮುಂತಾದ ಕ್ರೂರ ಪ್ರಾಣಿಗಳ ಆವಾಸವಾಗಿದ್ದು, ಮಠ ಸ್ಥಾಪನೆಗೆ ಸೂಕ್ತ ಸ್ಥಳವಲ್ಲ ಎಂದು ಗ್ರಾಮಸ್ಥರು ಮನವರಿಕೆ ಮಾಡಿಕೊಡುತ್ತಾರೆ. ಆಗ ಉಜ್ಜೈಯಿನಿ ಸ್ವಾಮಿಗಳು ತಮ್ಮ ಇಷ್ಟ ಲಿಂಗುವನ್ನು ಗುಡ್ಡದ ಬುಡದಲ್ಲಿಟ್ಟು, ಅಲ್ಲಿ ದೇವಸ್ಥಾನ ನಿರ್ಮಿಸಲು ಹೇಳುತ್ತಾರೆ. ಕಾಲಕ್ರಮೇಣ ಈ ವಿಷಯ ಜನಮಾನಸದಿಂದ ದೂರವಾಗುತ್ತದೆ. ದೇವಸ್ಥಾನ ನಿರ್ಮಿಸುವುದನ್ನು ಜನರು ಮರೆಯುತ್ತಾರೆ.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper







ಗ್ರಾಮದ ಹಸುಗಾಹಿಯು ಪ್ರತಿದಿನ ಹಸುಗಳನ್ನು ಮೇಯಿಸಲು ಗುಡ್ಡಕ್ಕೆ ಹೋಗುತ್ತಾನೆ. ಅದರಲ್ಲಿ ಗ್ರಾಮದ ಹಿರೇಮಾಳಪ್ಪನವರ ಹಸು ಗೌರಿಯೂ ಇರುತ್ತದೆ. ಹಿಂಡಿನಿಂದ ತಪ್ಪಿಸಿಕೊಂಡ ಹಸು ಗೌರಿ ಒಂದು ಪೊದೆಯ ಬಳಿ ತೆರಳುತ್ತದೆ. ಇದನ್ನು ಗಮನಿಸಿದ ಹಸುಗಾಹಿ ನಿಧಾನವಾಗಿ ಅತ್ತ ಧಾವಿಸುತ್ತಾನೆ. ಅಲ್ಲಿನ ಸನ್ನಿವೇಶ ಕಂಡು ದಿಗ್ಭ್ರಾಂತನಾಗುತ್ತಾನೆ. ಹಸು ಗೌರಿ ಪೊದೆಯ ಮಧ್ಯಕ್ಕೆ ತೆರಳಿ ಹಾಲು ಕರೆಯುತ್ತಿರುವ ದೃಶ್ಯವನ್ನು ಕಂಡು ಚಕಿತನಾಗುತ್ತಾನೆ. ದನಗಳನ್ನೆಲ್ಲಾ ಅಲ್ಲಿಯೇ ಬಿಟ್ಟು ಮನೆಗೆ ಓಡಿ ಬಂದು ವಿಷಯ ತಿಳಿಸುತ್ತಾನೆ. ಇವನ ಮಾತನ್ನು ಪರೀಕ್ಷೆ ಮಾಡಬೇಕು ಎಂದು ಮನೆಯವರು ಅವನನ್ನು ಹಿಂಬಾಲಿಸುತ್ತಾರೆ. ಹಸುಗೌರಿ ಪೊದೆಯ ಬಳಿ ಹಾಲು ಕರೆಯುವುದನ್ನು ಗಮನಿಸಿದಾಗ ಅವರಿಗೂ ಅಚ್ಚರಿ ಎನಿಸುತ್ತದೆ. ನಂತರ ಗ್ರಾಮಸ್ಥರನ್ನು ಕರೆದು ಸನ್ನಿವೇಶವನ್ನು ತೋರಿಸುತ್ತಾರೆ. ಗ್ರಾಮಸ್ಥರ ತೀರ್ಮಾನದಂತೆ ಅಲ್ಲಿನ ಪೊದೆಯನ್ನು ಬಯಲು ಮಾಡುತ್ತಾರೆ. ಆಗ ಅಲ್ಲಿನ ಶಿವಲಿಂಗ ಕಂಡು ಮತ್ತೊಮ್ಮೆ ಅಚ್ಚರಿಯಾಗುತ್ತದೆ. ನಂತರ ಜನರೆಲ್ಲ ಸೇರಿ ಅಲ್ಲಿ ದೇವಸ್ಥಾನ ನಿರ್ಮಿಸಲು ತೀರ್ಮಾನ ಮಾಡುತ್ತಾರೆ. ನಂತರದ ದಿನಗಳಲ್ಲಿ ಒಂದು ಪುಟ್ಟ ದೇವಸ್ಥಾನ ನಿರ್ಮಿಸಿ ಸಿದ್ದೇಶ್ವರ ದೇವಸ್ಥಾನ ಎಂದು ನಾಮಕರಣ ಮಾಡುತ್ತಾರೆ. ಇದು ಗ್ರಾಮದ ಹಿರಿಯರ ಬಾಯಲ್ಲಿ ಜನಜನಿತವಾದ ದಂತಕಥೆ.

ಸಾಮಾನ್ಯವಾಗಿ ಲಿಂಗು ಇರುವ ಕಡೆಗಳಲ್ಲಿ ಇಂತಹದ್ದೊಂದು ಕಥೆ ಸರ್ವೇಸಾಮಾನ್ಯ. ಏನೇ ಆಗಲಿ ಗ್ರಾಮಸ್ಥರ ನೆರವಿನೊಂದಿಗೆ ಇಲ್ಲೊಂದು ದೇವಸ್ಥಾನ ನಿರ್ಮಾವಾಯಿತು. ಈ ದೇವಸ್ಥಾನ ನಿರ್ಮಾಣ ಕಾಲದ ಬಗ್ಗೆ ಎಲ್ಲಿಯೂ ಉಲ್ಲೇಖಗಳಿಲ್ಲ. ಆದರೆ ತಲತಲಾಂತರದ ಹಿರಿಯರ ಹೇಳಿಕೆಗಳಿಂದ ಈ ದೇವಸ್ಥಾನ 250–300 ವರ್ಷಗಳ ಹಿಂದೆ ನಿರ್ಮಾಣ ಆಗಿರಬಹುದು ಎಂದು ಅಂದಾಜಿಸಬಹುದು.

ಇತ್ತೀಚಿನ ವರ್ಷಗಳಲ್ಲಿ ಅಂದರೆ ಸುಮಾರು ಐವತ್ತು–ಅರವತ್ತು ವರ್ಷಗಳಿಂದ ಈಚೆಗೆ ದೇವಸ್ಥಾನ ಅಭಿವೃದ್ಧಿ ಹೊಂದುತ್ತಾ ಸಾಗಿದೆ. ದೇವಸ್ಥಾನಕ್ಕೆ ಗೋಪುರ ನಿರ್ಮಿಸಲಾಗಿದೆ. ಅಲ್ಲದೇ ಮುಖ್ಯ ಪ್ರವೇಶದ್ವಾರಕ್ಕೆ ಕಿರುಗೋಪುರ ನಿರ್ಮಿಸಲಾಗಿದೆ. ಪ್ರಾಂಗಣದಲ್ಲಿ ಅನೇಕ ದೇವರುಗಳ ಮೂರ್ತಿಗಳನ್ನು ಸ್ಥಾಪಿಸಲಾಗಿದೆ. ಜೊತೆಗೆ ನವಗ್ರಹ ಮಂಟಪ ಹಾಗೂ ಕಲ್ಯಾಣ ಮಂಟಪವೂ ಇದೆ. ಪ್ರತಿವರ್ಷ ಪುಷ್ಯ ಮಾಸದ ಬನದ ಹುಣ್ಣಿಮೆ ನಂತರ ಬರುವ ಶುಕ್ರವಾರದಂದು ಅದ್ದೂರಿಯಾಗಿ ಸಿದ್ದೇಶ್ವರನ ರಥೋತ್ಸವ ನಡೆಯುತ್ತದೆ. ಸುತ್ತಮುತ್ತಲ ಗ್ರಾಮದ ಸಾವಿರಾರು ಜನರು ಈ ರಥೋತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. 150 ವರ್ಷಗಳಿಗೂ ಹಿಂದಿನಿಂದ ಈ ರಥೋತ್ಸವ ನಡೆಯುತ್ತಿರುವ ಬಗ್ಗೆ ಪ್ರತೀತಿ ಇದೆ. ನೂರು ವರ್ಷಗಳಿಗೂ ಅಧಿಕ ಇತಿಹಾಸ ಇರುವ ಕಟ್ಟಿಗೆಯ ರಥವನ್ನು ಪ್ರತಿವರ್ಷ ಎಳೆಯಲಾಗುತ್ತಿತ್ತು. ರಥ ಕ್ರಮೇಣ ಶಿಥಿಲವಾದ್ದರಿಂದ 2016ರಲ್ಲಿ ಹೊಸ ರಥ ನಿರ್ಮಿಸಲಾಗಿದೆ. ಅಂದಿನಿಂದ ಪ್ರತಿವರ್ಷ ಹೊಸ ರಥ ಎಳೆಯಲಾಗುತ್ತದೆ.

ಗ್ರಾಮದ ಕೆರೆಯ ಬಳಿ ರಥದ ಮನೆ ನಿರ್ಮಿಸಲಾಗಿದೆ. ರಥದ ಮನೆಯ ಪೂರ್ವಾಭಿಮುಖವಾಗಿ ಕಟ್ಟೆ ಬಸವೇಶ್ವರ ದೇವಸ್ಥಾನದ ವರೆಗೂ ರಥ ಎಳೆದುಕೊಂಡು ಹೋಗಿ ಪುನಃ ವಾಪಾಸು ರಥದ ಮನೆಯ ತನಕ ಎಳೆದು ತರಲಾಗುತ್ತದೆ. ರಥೋತ್ಸವದ ಮರುದಿನ ಶನಿವಾರ ಅಗ್ನಿ ಕಾರ್ಯಕ್ರಮ ನಡೆಯುತ್ತದೆ. ಇಡೀ ಗ್ರಾಮದ ಜನರೆಲ್ಲ ಕೆರೆಯ ಬಳಿ ಇರುವ ಜಾಗದಲ್ಲಿ ಸೇರಿ ಅಗ್ನಿ ಕಾರ್ಯಕ್ರಮ ವೀಕ್ಷಿಸುತ್ತಾರೆ. ಎಲ್ಲಾ ದೇವತಾ ಕಾರ್ಯಗಳು ಶ್ರೀ ಷ.ಬ್ರ ಮರುಳಾರಾಧ್ಯ ಶಿವಾಚಾರ್ಯ ಮಹಾಸ್ವಾಮಿ ಗಳು ಶ್ರೀ ಸಿದ್ದೇಶ್ವರ ಸಂಸ್ಥಾನ ಕಟ್ಟಿಮನಿ ಹಿರೇಮಠ ಅಳವುಂಡಿ, ಹೊಳಗುಂದಿ–ಬಾವಿಹಳ್ಳಿ ಇವರ ದಿವ್ಯ ನೇತೃತ್ವದಲ್ಲಿ ನಡೆಯುತ್ತವೆ.

ಸಿದ್ದೇಶ್ವರ ದೇವರು ಹೊಳಗುಂದಿ ಬಾವಿಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಆರಾಧ್ಯ ದೈವವಾಗಿದೆ. ಸಾವಿರಾರು ಜನ ಸೇರುವ ಈ ಜಾತ್ರೆಯ ಎರಡೂ ದಿನಗಳ ಕಾಲ ಭಕ್ತಾದಿಗಳಿಂದ ಅನ್ನಸಂತರ್ಪಣೆ ಇರುತ್ತದೆ. ಎರಡೂ ದಿನಗಳ ವಿಶೇಷ ಎಂದರೆ ನಾಟಕಗಳು. ಇಲ್ಲಿದ ಕಲಾವಿದರು ಅಭಿನಯಿಸುವ ನಾಟಕವು ಸುತ್ತಮುತ್ತಲ ಗ್ರಾಮದ ಕಲಾಭಿಮಾನಿಗಳ ಆಕರ್ಷಣೆಯ ಕೇಂದ್ರಬಿಂದು ವಾಗಿವೆ. ಇಂತಹ ಸುಂದರ ಕ್ಷಣಗಳನ್ನು ಅನುಭವಿಸಲು ನೀವು ಹೊಳಗುಂದಿಯ ಜಾತ್ರೆಯ ಬನ್ನಿ. ಸ್ವಾಮಿಯ ಕೃಪೆಗೆ ಪಾತ್ರರಾಗಿರಿ.



# ಅರಿವು-ಮರೆವು ಸಮಚಿತ್ತತೆಯ ಸಂಕೇತಗಳು...

■ **ಡಾ. ರಾಜಶೇಖರ ಜಮದಂಡಿ** ಹೊಸಪೇಟೆ: ಮೊ: 9448441471.

## ವಿಚಾರ ಲಹರಿ

ನಾನೆಂಬುದೇ ಜೀವ, ನೀನೆಂಬುದೇ ಶಿವ. ನಾನೆಂಬುದೇ ಅಂಗ, ನೀನೆಂಬುದೇ ಲಿಂಗ. ಮರೆವು ಅರಿವಾದಾಗ ಜೀವ ದೇವನಾಗುವುದು. ನೋವಿನ ನೆರವಿನಿಂದ ಮರೆವು ಅರಿವಾಗುವುದು ಸಹಜ. ನೋವಿರದಿದ್ದರೆ ಅರಿವು ಕೂಡ ಮರೆಯಾಗುತ್ತದೆ. ನಮ್ಮ ಅರಿವೇ ನಮಗೆ ಗುರು. 'ಅರಿತರೆ ಶರಣ ಮರೆತರೆ ಮಾನವ' ಎಂದಿದ್ದಾರೆ ಶರಣರು. ನಮ್ಮ ಸಾಮರ್ಥ್ಯದ ಬಗ್ಗೆ ನಮಗೆ ಸರಿಯಾದ ಅರಿವು ಇರಬೇಕೇ ಹೊರತು ಸಂದೇಹವಿರಬಾರದು. ಮನುಷ್ಯನ ಅರಿವಿನ ಸಾಮ್ರಾಜ್ಯದಲ್ಲಿ ಏನೆಲ್ಲಾ ಅಡಗಿದೆಂದರೆ ಜಗತ್ತಿನಲ್ಲಿ ಏನೆಲ್ಲಾ ಸಹಿಸಿಕೊಳ್ಳಬಹುದು. ಆದರೆ ಈ ಮರೆವಿನಿಂದಾಗುವ ಅನಾಹುತಗಳನ್ನು ಸಹಿಸಿಕೊಳ್ಳುವುದು ಕಷ್ಟ.

ಅರಿವಿನ ಮಹಾಜ್ಯೋತಿ ಎಲ್ಲರಲ್ಲಿ ಬೆಳಗಿದಾಗ ಮರೆವಿನ ಸಂಕಷ್ಟದಿಂದ ದೂರ ಸಾಗಲು ಸಾಧ್ಯ. ಸಮಾಜದಲ್ಲಿ ಅರಿವುಳ್ಳವರ ಸಂಖ್ಯೆ ಕಡಿಮೆಯಾದಂತೆಯೇ ಹುಚ್ಚರ ಸಂತೆ ಹೆಚ್ಚಾಗುತ್ತದೆ. ಅರಿವೆಂಬುದೇ ಸಮಷ್ಟಿ ಮರೆವೆಂಬುದೇ ವ್ಯಷ್ಟಿ ಎನ್ನಬಹುದಾದರೂ ಇವೆರಡೂ ಒಂದೇ ನಾಣ್ಯದ ಎರಡು ಮುಖಗಳು. ಕಾರಣ ಅರಿವು–ಮರೆವುಗಳು ಜೀವನದುದ್ದಕ್ಕೂ ಆಗಾಗ ಬಂದು ಮರೆಯಾಗುತ್ತವೆ.

ಅರಿವಿನ ಅಭಾವ ಹೆಚ್ಚಾದಾಗ ಮನುಷ್ಯ ಮನುಷ್ಯರ ನಡುವೆ, ರಾಜ್ಯಗಳ–ರಾಷ್ಟ್ರಗಳ ನಡುವೆ ಕ್ಷುಲ್ಲಕ ವಿಚಾರಗಳಿಂದ ದೂರ ಸರಿಯುವುದು ಕಂಡುಬರುತ್ತದೆ. ಉತ್ತಮ ನಡವಳಿಕೆಯ ಅರಿವು ಮೂಡಿದ್ದೇ ಆದರೆ ಎಂಥ ಅಡ್ಡಗೋಡೆಗಳನ್ನು ಕೆಡವಬಹುದು. ಅಡ್ಡಗೋಡೆಗಳೆಂದರೆ ಅವಿಶ್ವಾಸ, ಅನ್ಯಾಯ, ಅಸಮಧಾನ ಮುಂತಾದವುಗಳು. ಇವು ಜೀವನದ ಬಹುಮುಖ್ಯವಾದ ಪ್ರೀತಿಯನ್ನು ತಿಂದು ಹಾಕುತ್ತವೆ. ಮರೆವಿನಿಂದ ನಮ್ಮೊಳಗೆ ಅಪನಂಬಿಕೆ ಅಧಿಕವಾಗಿ ಅಪ್ರಯೋಜಕ ಸನ್ನಿವೇಶಗಳು ಎದುರಾಗುತ್ತವೆ.

ಕೆಲವರ ಪ್ರಕಾರ ಎಲ್ಲಿ ಅರಿವು ಇರುತ್ತದೆಯೋ ಅಲ್ಲಿ ದೇವರಿರುತ್ತಾನಂತೆ. ಅದೇಪ್ರಕಾರ ಎಲ್ಲಿ ಮರೆವಿರುತ್ತದೆಯೋ ದ್ವೇಷಾಸೂಯೆಗಳು ಸತ್ತಿರುತ್ತವೆಯಂತೆ. ಅರಿವು ಒಬ್ಬರಿಗೊಬ್ಬರಲ್ಲಿ ಆತ್ಮೀಯತೆಗೆ ನೆರವಾಗಬೇಕೇ ಹೊರತು ದ್ವೇಷ ಭಾವನೆಗಳಿಗಲ್ಲ. ಅರಿವು ಮೂಡಿದ್ದಲ್ಲಿ ಪ್ರೀತಿ, ನಂಬಿಕೆ, ಸಹೃದಯತೆಗೆ ಕೊರತೆ ಇರುವುದಿಲ್ಲ. ಮರೆವಿನಲ್ಲಿ ಮುಳುಗಿದರೆ ಗೊಂದಲ, ಅತಿರೇಕ, ಅಶಾಂತಿಗಳು ತಲೆದೋರುವುದು ಸಹಜ. ಈ ಸಂದರ್ಭದಲ್ಲಿ ಅಕ್ಕನ ವಚನ ನೆನಪಾಗುತ್ತಿದೆ:

ಅರಿಯದವರೊಡನೆ ಸಂಗವ ಮಾಡಿದರೆ
ಕಲ್ಲ ಹೊಯ್ದು ಕಿಡಿಯ ತೆಗೆದುಕೊಂಬಂತೆ
ಬಲ್ಲವರೊಡನೆ ಸಂಗವ ಮಾಡಿದಡೆ
ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ
ಚೆನ್ನಮಲ್ಲಿಕಾರ್ಜುನಯ್ಯ
ನಿಮ್ಮ ಶರಣರ ಸಂಗವ ಮಾಡಿದಡೆ
ಕರ್ಪೂರದ ಗಿರಿಯನುರಿ ಕೊಂಬಂತೆ

ಸರಿಯಾದ ತಿಳಿವಳಿಕೆಯಿಲ್ಲದ ಅಜ್ಞಾನಿ(ಮರೆವು)ಯೊಡನೆ ಸಂಗ ಮಾಡಿದರೆ ಬೆಂಕಿಯನ್ನು ಮಡಿಲಲ್ಲಿಟ್ಟುಕೊಂಡಂತೆ. ಅಲ್ಲಿ ಸಾತ್ವಿಕ ಸ್ನೇಹ ಸಮ್ಮಿಲನಗಳಿರುವುದಿಲ್ಲ. ಬಲ್ಲವರೊಡನೆ ಸಂಗ ಮಾಡಿದರೆ ಬೆಣ್ಣೆಯನ್ನು ಪಡೆದಂತೆ ಎಂದು ಅಕ್ಕ ಹೇಳಿದ್ದಾಳೆ. ಅಲ್ಲದೆ ಉತ್ತಮ ಮಹಾನೀಯರ(ಶರಣರ) ಸಂಗವೆನ್ನುವುದು ಕರ್ಪೂರದ ಗಿರಿಯಂತೆ ಎಂದು ಹೇಳಿರುವುದು ಅತ್ಯಂತ ಉಚಿತವಾಗಿದೆ. ಯಾವುದೇ ಮಾಡುವ ಕೆಲಸಕಾರ್ಯಗಳಿರಲಿ ಕಿಂಚಿತ್ತಾದರೂ ಆ ಬಗೆಗೆ ತಿಳಿವಳಿಕೆಯ ಅರಿವು ಮುಖ್ಯ. ಇದರಿಂದ ಹಿಡಿದ ಗುರಿ ಈಡೇರಲು ಸಾಧ್ಯ. ನಂತರ ಪ್ರತಿಫಲವೂ ಲಭ್ಯ. ಕೆಲವೊಮ್ಮೆ ಅರಿವು ಹೆಚ್ಚಾದಾಗ ಅಹಂ ಆವರಿಸಿ ನಾನೇ ಮಾಡಿದೆ, ನನ್ನಿಂದಲೇ ಆಯ್ತು ಎಂಬ ಮಾತುಗಳು ಇತರರಿಗೆ ಕಸಿವಿಸಿಗೊಳಿಸಬಹುದು. ಎಲ್ಲವೂ ಭಗವಂತನ ಪ್ರೇರಣೆಯಿಂದಲೇ ಆಗಿದೆ ಎಂಬ ದೂರಾಲೋಚನೆ ಮನದಲ್ಲಿ ಬಂದಾಗ ಆತ್ಮತೃಪ್ತಿ ಅಪ್ಯಾಯಮಾನವಾಗಿರುತ್ತದೆ.

ಬದುಕಿನಲ್ಲಿ ಆಳವಾದ ಹಾಗೂ ಉದಾತ್ತವಾದ ಆಲೋಚನೆಗಳಿಗೆ ಮೂಲವಾದದ್ದು ಅರಿವಿನ ಮಹತ್ವ. ಆದರೆ ನಾವು ಅಪರಿಮಿತ ಆಶೆಗಳ ಹೊರೆಯನ್ನು ಹೊತ್ತುಕೊಂಡು ಪ್ರಪಂಚಕ್ಕೆ ಬಂದಿರುವ ಉದ್ದೇಶವನ್ನೇ ಮರೆತಿದ್ದೇವೆ. ನಾವೆಲ್ಲ ಇಲ್ಲಿಯ ಪ್ರವಾಸಿಗಳೇ ಹೊರತು ನಿವಾಸಿಗಳಲ್ಲ. ಈ ಮರೆವಿನ ಭ್ರಮಾಲೋಕದಿಂದ ಬಯಲಾಗಿ ಅರಿವಿನ ಸಾಮ್ರಾಜ್ಯ ಪ್ರವೇಶಿಸಬೇಕು. ಒಟ್ಟಾರೆ ಬದುಕಿನುದ್ದಕ್ಕೂ ಯಾವುದನ್ನು ಅರಿವಿನಿಂದ ಅರ್ಥಪೂರ್ಣವಾಗಿ ಬಳಸಿಕೊಳ್ಳುತ್ತೇವೆಯೋ ಆ ಮೂಲಕ ಮುಕ್ತಿಯಡೆಗೆ ತಲುಪಲು ಸಾಧ್ಯ. ಯಾವ ಶಕ್ತಿಯನ್ನು ಮೈಗೂಡಿಸಿಕೊಳ್ಳುತ್ತೇವೆ ಅದರಂತೆ ನಮ್ಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಅರಿವ–ಮರೆವುಗಳನ್ನು ತಕ್ಕಮಟ್ಟಿಗೆ ಸಮಚಿತ್ತತೆಯಲ್ಲಿಟ್ಟುಕೊಂಡು ಸಾಗೋಣ. ತ್ಯಾಜ್ಯವಾದುದನ್ನು ಬಿಟ್ಟು ಪೂಜ್ಯವಾದುದನ್ನು ಪುರಸ್ಕರಿಸಿ ಎಲ್ಲರೂ ಒಂದಾಗಿ ಬಾಳೋಣ...

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಕಣಕಣದಲಿರಲಿ ದೇಶಭಕ್ತಿ

ಮೂದಿಕ್ಕಲಿ ಶರಧಿಯೂ ಎಮಗೆ ಕಾವಲು....
ಉತ್ತರದಿ ಹಿಮಾಲಯವು ಎಮಗದು
ಮಿಗಿಲು(ಪ )

ಗಂಗೆ ತುಂಗೆ ಕಾವೇರಿಯ ಜುಳು ಜುಳು ನಾದ....
ರಾಮಾಯಣ ಮಹಾಭಾರತ ಜೀವನವೇದ (1)

ಬುದ್ಧ ಬಸವ ಗಾಂಧೀ ಶಾಸ್ತ್ರಿ ಎಂದು
ಅಮರರು....
ಮನುಜಮತದಿ ವಿಶ್ವಪಥವ ಅರಿತು ನಡೆದರು....
(2)

ಸ್ವಾತಂತ್ರ್ಯದ ಹಣತೆಯೆಂದೂ ಬೆಳಗುತಲಿರಲಿ....
ತಿಮಿರವನ್ನು ತೊಲಗಿಸುತ್ತ ಬಾಳ ಬೆಳಗಲಿ(3)

ಕಣಕಣದಿ ಬೆರೆತಿರಲಿ ದೇಶಭಕ್ತಿಯು....
ನಾಡಕಟ್ಟಲದುವೆ ಎಂದು ದಿವ್ಯ ಶಕ್ತಿಯು(4)

– ಶೇಖರಯ್ಯ ಟಿ ಎಚ್ ಎಂ ಗೆದ್ದಲಗಟ್ಟೆ
ಕೂಡ್ಲಿಗಿ ತಾಲೂಕು ವಿಜಯನಗರ ಜಿಲ್ಲೆ

ಮಕ್ಕಳ ಜ್ಞಾನಭಂಡಾರ ಹೆಚ್ಚಿಸಲು
ಇರಲಿ ಮನೆಗೊಂದು ದಿನಪತ್ರಿಕೆ
ಪತ್ರಿಕೆ ಓದುವುದರಿಂದ ಮಕ್ಕಳಿಗಾಗುವ ಪ್ರಯೋಜನೆಗಳು
ಭಾಷಾ ಕೌಶಲ್ಯ ಸುಧಾರಣೆ
ಸಾಮಾನ್ಯ ಜ್ಞಾನ ಹೆಚ್ಚಳ
ನೈತಿಕ ಮತ್ತು ಸಾಮಾಜಿಕ ಅರಿವು
ಮೊಬೈಲಿನಿಂದ ದೂರವಿರುವುದು
ಓದುವ ಹವ್ಯಾಸಕ್ಕೆ ಅಡಿಪಾಯ
ಹೊಸಪೇಟೆಯಲ್ಲಿ ಹಂಪಿ ಟೈಮ್ಸ್ ಪತ್ರಿಕೆಗಾಗಿ ಸಂಪರ್ಕಿಸಿ
9902909399, 9980559681
9740742251, 8073589125

# ರೈತರಿಂದ ಕಮಿಷನ್ ವಸೂಲಿ ಅಕ್ರಮ



**ಮೊದಲ ಪುಟದಿಂದ**

ನಿರ್ವಹಣೆಯಾಗದಿರುವುದರ ಕುರಿತು ಬೇಸರ ವ್ಯಕ್ತಪಡಿಸಿದರು. ಘಟಕದಲ್ಲಿನ ಮಣ್ಣನ್ನು ಪರೀಕ್ಷೆಗೆ ಒಳಪಡಿಸಬೇಕು. ಅದನ್ನು ರೈತರಿಗೆ ನೀಡುವ ಮೂಲಕ ತೋಟಗಾರಿಕೆ ಬೆಳೆ ಬೆಳೆಯಲು ಅನುವು ಮಾಡಿಕೊಡಬೇಕು. ಬಳ್ಳಾರಿ ನಗರದಲ್ಲಿ ಪ್ರತಿ ದಿನ ಸಂಗ್ರಹಣೆಗೊಳ್ಳುವ ಕಸವನ್ನು ವಿಂಗಡಿಸಿ ಇಲ್ಲಿಗೆ ಸರಬರಾಜು ಮಾಡಬೇಕು ಎಂದು ತಿಳಿಸಿದರು.

ಸರಿಯಾದ ನಿರ್ವಹಣೆ ಇಲ್ಲ, ಬೆಂಕಿ ಹೊತ್ತಿಕೊಂಡರೆ ಸಂಪೂರ್ಣ ಭಸ್ಮವಾಗುತ್ತದೆ. ಪಾಲಿಕೆ ಅಧಿಕಾರಿಗಳು ನಿಯಮಿತವಾಗಿ ಭೇಟಿ ನೀಡಬೇಕು ಎಂದು ಸೂಚಿಸಿದರಲ್ಲದೇ, ಇಲ್ಲಿನ ಪರಿಸರದಿಂದ ಮನುಷ್ಯರಿಗೆ ಯಾವುದೇ ರೀತಿಯ ಅಡ್ಡ ಪರಿಣಾಮ ಬೀರುತ್ತಿದೆಯೇ ಎಂದು ವಿಚಾರಿಸಿದರು.

**ಬಳ್ಳಾರಿ ಮಹಾನಗರ ಪಾಲಿಕೆ ಕಚೇರಿ:**

ನಂತರ ಉಪಲೋಕಾಯುಕ್ತ ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಅವರು, ಅನಿರೀಕ್ಷಿತವಾಗಿ ಮಹಾನಗರ ಪಾಲಿಕೆಯ ಕಚೇರಿಗೆ ಭೇಟಿ ನೀಡಿ ಅಲ್ಲಿನ ವಿವಿಧ ಶಾಖೆಗಳ ಕಡತ ಹಾಗೂ ಇತರೆ ದಾಖಲೆಗಳ ಪರಿಶೀಲನೆ ನಡೆಸಿದರು.

ಪಾಲಿಕೆ ಕಚೇರಿಯ ಅಧಿಕಾರಿ ಮತ್ತು ಸಿಬ್ಬಂದಿಗಳ ಹಾಜರಾತಿ ಪುಸ್ತಕ, ಚಲನ–ವಲನ ವಹಿ ಮತ್ತು ನಗದು ಘೋಷಣಾ ವಹಿಗಳ ಬಗ್ಗೆ ವಿಚಾರಿಸಿ ಮಾಹಿತಿ ಪಡೆದುಕೊಂಡರಲ್ಲದೇ, ಸರಿಯಾಗಿ ನಿರ್ವಹಿಸದಿರುವ ಕುರಿತು ಅಧಿಕಾರಿಗಳ ಮೇಲೆ ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿ ನಿಯಮ ಬಾಹಿರವಾಗಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಲಾಗುತ್ತಿದೆಯೇ, ಒಂದು ವೇಳೆ ನಿಯಮ ಬಾಹಿರವಾಗಿ ಕಟ್ಟಡ ನಿರ್ಮಾಣ ಮಾಡಿದ್ದಲ್ಲಿ ಅಂತವರಿಗೆ ನೋಟಿಸ್ ನೀಡಲಾಗಿದೆಯೇ?, ಇಲ್ಲಿಯವರೆಗೆ ಎಷ್ಟು ನೋಟಿಸ್‌ಗಳನ್ನು ನೀಡಿದ್ದೀರಿ ಎಂದು ಮಹಾನಗರ ಪಾಲಿಕೆ ಆಯುಕ್ತರಿಗೆ ಪ್ರಶ್ನಿಸಿದರು.

ನಗರದಲ್ಲಿ ತೆರಿಗೆದಾರರಿಂದ ಸಕಾಲದಲ್ಲಿ ತೆರಿಗೆ ಸಂಗ್ರಹವಾಗುತ್ತಿದೆಯೇ, ಜನನ ಮತ್ತು ಮರಣ ನೋಂದಣಿ ಪ್ರಕ್ರಿಯೆಯಲ್ಲಿ ವಿಳಂಬವಾಗುತ್ತಿದೆಯೇ ಎಂದು ವಿಚಾರಿಸಿದ ಅವರು, ನಗರದ ಹೋಟೆಲ್‌ಗಳಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯತೆಗೆ ಆದ್ಯತೆ ನೀಡುವಂತೆ ಪರಿಸರ ಇಂಜಿನಿಯರ್ ಅಧಿಕಾರಿಗಳಿಗೆ ಸೂಚಿಸಿದರು.

**ಬಳ್ಳಾರಿ ತಾಲ್ಲೂಕು ತಹಶೀಲ್ದಾರರ ಕಚೇರಿ:**

ನಗರದ ಅನಂತಪುರ ರಸ್ತೆಯ ನೂತನ ಜಿಲ್ಲಾಡಳಿತ ಭವನದ ತಹಶೀಲ್ದಾರರ ಕಚೇರಿಗೆ ದಿಢೀರ್ ಭೇಟಿ ನೀಡಿದ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು, ಕಚೇರಿಯ ವಿವಿಧ ದಾಖಲೆ ಕಡತಗಳನ್ನು ಪರಿಶೀಲಿಸಿದರು.

ಕಚೇರಿಯ ಸಿಬ್ಬಂದಿಗಳ ಹಾಜರಾತೆ ಪುಸ್ತಕ, ಚಲನ–ವಲನ ವಹಿ ಮತ್ತು ನಗದು ಘೋಷಣೆ ವಹಿ ಪುಸ್ತಕಗಳನ್ನು ವಿಸ್ತರವಾಗಿ ಪರಿಶೀಲನೆ ನಡೆಸಿದರು. ಭೂಮಿ ಕೇಂದ್ರ, ಕಾವೇರಿ ತಂತ್ರಾಂಶ, ಪಹಣಿ ವಿತರಣೆ, ತಾಲ್ಲೂಕು ವ್ಯಾಪ್ತಿಯಲ್ಲಿ ಭೂಮಿ ಒತ್ತುವರಿ ಕುರಿತಂತೆ ಅನೇಕ ಮಾಹಿತಿಯನ್ನು ತಹಶೀಲ್ದಾರ ಗುರುರಾಜ ಅವರಿಂದ ಪಡೆದುಕೊಂಡರು.

ಕಂದಾಯ ವಿಭಾಗದ ತಹಶೀಲ್ದಾರರು, ಶಿರಸ್ತೇದಾರರು, ಇತರೆ ಸಿಬ್ಬಂದಿಗಳು ತಪ್ಪದೇ ಕಂದಾಯ ವಿಭಾಗಕ್ಕೆ ಸಂಬಂಧಿಸಿದಂತೆ ಕಾಯ್ದೆ–ಕಾನೂನುಗಳ ಅಧ್ಯಯನ ಮಾಡಬೇಕು. ಸಾರ್ವಜನಿಕ ಸೇವೆ ಒದಗಿಸುವಲ್ಲಿ ಯಾವುದೇ ರೀತಿಯ ವಿಳಂಬವಾಗಬಾರದು ಹಾಗೂ ಮಾಹಿತಿ ನೋಂದಣಿಯನ್ನು ತಪ್ಪಿಲ್ಲದಂತೆ ನಮೂದಿಸಬೇಕು. ದಾಖಲೆಗಳಿಗಾಗಿ ಸಾರ್ವಜನಿಕರನ್ನು ಕಚೇರಿಗಳಿಗೆ ಅಲೆದಾಡಿಸಬಾರದು ಎಂದು ತಿಳಿಸಿದರು.

ಇದೇ ವೇಳೆ ತಹಶೀಲ್ದಾರ ಕಚೇರಿಯ ಅಧಿಕಾರಿ ಮತ್ತು ಸಿಬ್ಬಂದಿಯವರೊಂದಿಗೆ ಸಂವಾದ ನಡೆಸಿದ ಉಪಲೋಕಾಯುಕ್ತರು, ಸಾರ್ವಜನಿಕರಿಗೆ ಪ್ರಾಮಾಣಿಕ ಸೇವೆ ನೀಡಬೇಕು. ಸರ್ಕಾರ ಸಂಬಳ ನೀಡುತ್ತಿದೆ, ಲಂಚದ ಆಮಿಷಕ್ಕೆ ಒಳಗಾಗಬಾರದು ಎಂದು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಸಹಾಯಕ ಆಯುಕ್ತ ಪಿ.ಪ್ರಮೋದ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಕೆ.ಎಂ. ರಾಜಶೇಖರ್, ಸಹಾಯಕ ನಿಬಂಧಕರಾದ ಶುಭವೀರ್ ಜೈನ್.ಬಿ., ಉಪ ನಿಬಂಧಕರಾದ ಅರವಿಂದ.ಎನ್.ವಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಯೂ ಆದ ರಾಜೇಶ್ ಎನ್.ಹೊಸಮನೆ, ಬಳ್ಳಾರಿ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿ.ಸಿದ್ಧರಾಜು, ಡಿವೈಎಸ್ಪಿ ವಸಂತ ಕುಮಾರ್ ಸೇರಿದಂತೆ ಬಳ್ಳಾರಿ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು, ಮತ್ತಿತರರು ಹಾಜರಿದ್ದರು.

# ಆರೋಗ್ಯ ಹಾಗೂ ಸದೃಢ ಮಗುವಿಗಾಗಿ ಗರ್ಭಿಣಿಯರು ಪೌಷ್ಟಿಕ ಆಹಾರ ಸೇವಿಸಿ



■ ಹಂಪಿ ಟೈಮ್ಸ್ ಕೂಡ್ಲಿಗಿ

ಪ್ರತಿ ದಿನ ಊಟದಲ್ಲಿ ಕಬ್ಬಿಣಾಂಶ ಹೆಚ್ಚಿರುವ ಪದಾರ್ಥಗಳನ್ನು ಗರ್ಭಿಣಿಯರು ಸೇವನೆ ಮಾಡಬೇಕು ಎಂದು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಜಗದೀಶ್ ಹೇಳಿದರು.

ಶಿಶುಭಿವೃದ್ಧಿ ಇಲಾಖೆ ಹಾಗೂ ತಿಮ್ಮಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಪಟ್ಟಣದ ಅಜಾದ್ ನಗರದ ಅಂಗನವಾಡಿ ಬಿ ಕೇಂದ್ರದಲ್ಲಿ ಪೋಷಣ್ ಅಭಿಯಾನ ಯೋಜನೆಡಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪೌಷ್ಟಿಕ ಆಹಾರ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಗರ್ಭಿಣಿಯರು ನಿತ್ಯ ಸೇವಿಸುವ ಆಹಾರದಲ್ಲಿ ಸಾಕಷ್ಟು ಪೋಷಕಾಂಶಗಳು ಇರುವಂತೆ ನೋಡಿಕೊಳ್ಳಬೇಕು. ಸಾಮಾನ್ಯ ಮಹಿಳೆಯಗಿಂತ ಗರ್ಭಿಣಿಯರು ಮೂರು ಪಟ್ಟು ಹೆಚ್ಚು ಕ್ಯಾಲೋರಿಯುಕ್ತ ಆಹಾರ ಸೇವಿಸಬೇಕು. ಇದಕ್ಕಾಗಿ ಸೊಪ್ಪು, ತರಕಾರಿ, ಹಣ್ಣು, ಹಾಲು, ಮೊಸರು, ಮಜ್ಜಿಗೆ ಸೇರಿದಂತೆ ಸಿರಿಧಾನ್ಯಗಳನ್ನು ಬಳಕೆ ಮಾಡಿಕೊಳ್ಳಬೇಕು. ಇದರೊಂದಿಗೆ ವೈದ್ಯರು ಹಾಗೂ ಆರೋಗ್ಯ ಕಾರ್ಯಕರ್ತೆಯರು ನೀಡುವ ಸಲಹೆಗಳನ್ನು ಪಾಲಿಸಬೇಕು ಎಂದು ಹೇಳಿದರು.

ತಾಲ್ಲೂಕು ಆಶಾ ಕಾರ್ಯಕರ್ತೆಯರ ಮೇಲ್ವಿಚಾರಕಿ ಲತಾ, ಕಿರಿಯ ಆರೋಗ್ಯ ಸುರಕ್ಷಣಾಧಿಕಾರಿ ನೇತ್ರಾವತಿ ಮಾತನಾಡಿದರು. ಆಶಾ ಕಾರ್ಯಕರ್ತೆಯರಾದ ಪದ್ಮ, ಎ.ಎಂ. ಸಾವಿತ್ರಿ, ಅಂಗನವಾಡಿ ಕಾರ್ಯಕರ್ತೆ ಸೊಲ್ಲಮ್ಮ, ಸಹಾಯಕಿ ನಿರ್ಮಲ ಹಾಗೂ ತಾಯಾಂದಿರು ಪಾಲ್ಗೊಂಡಿದ್ದರು.

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

# ಕೂಡ್ಲಿಗಿ ಕ್ಷೇತ್ರದ ಅಭಿವೃದ್ಧಿಗೆ ಸದಾ ಸಿದ್ಧ

## ಶಾಸಕ ಎನ್.ಟಿ.ಶ್ರೀನಿವಾಸ ಹೇಳಿಕೆ | ವಿವಿಧ ಕಾಮಗಾರಿಗಳಿಗೆ ಭೂಮಿ ಪೂಜೆ

■ ಹಂಪಿ ಟೈಮ್ಸ್ ಕೂಡ್ಲಿಗಿ



ಎಲ್ಲರ ಸಹಕಾರದೊಂದಿಗೆ ಕ್ಷೇತ್ರದ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುವೆ ಎಂದು ಶಾಸಕ ಡಾ.ಎನ್.ಟಿ. ಶ್ರೀನಿವಾಸ್ ಹೇಳಿದರು.

ತಾಲೂಕಿನ ಮಹದೇವಪುರ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಕಾಲೋನಿಯ ಸಿಸಿ ರಸ್ತೆ ನಿರ್ಮಾಣಕ್ಕೆ 90 ಲಕ್ಷ ಅನುದಾನ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳ ಕಾಮಗಾರಿಗಳ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಹಾಗೂ ಸರ್ವರಿಗೂ ಅನುಕೂಲವಾಗುವ ಕಾಮಗಾರಿ ಗಳನ್ನು ತ್ವರಿತವಾಗಿ ನೆರವೇರಿಸುವ ಮೂಲಕ ಬೇಡಿಕೆಗಳಿಗೆ ಸ್ಪಂಧಿಸಿದ್ದೇನೆ ಎಂದರು.

ವಿಪರೀತ ಮಳೆ ಸುರಿದ ಹಿನ್ನೆಲೆ ಪ್ರವಾಹವಾಗಿ ಅಂಬೇಡ್ಕರ್ ಕಾಲೋನಿ ಜನತೆಯು ಸಾಕಷ್ಟು ತೊಂದರೆಯನ್ನು ಅನುಭವಿಸಿದ್ದನ್ನು ಕಣ್ಣಾರೆ ಕಂಡಿದ್ದೇ, ಈ ಸಮಸ್ಯೆಗೆ ಪರಿಹಾರವನ್ನೂ ನೀಡುವುದಾಗಿ ಭರವಸೆ ನೀಡಿದ್ದರಿಂದ, ಅಗತ್ಯ ಅನುದಾನದೊಂದಿಗೆ ಸುವ್ಯವಸ್ಥೆವಾಗಿ ನೀರು ಹರಿಯುವಂತೆ, ಚರಂಡಿ, ಸಿಸಿ ರಸ್ತೆಯನ್ನು ನಿರ್ಮಿಸಲು ಭೂಮಿ ಪೂಜೆಯನ್ನು ನೆರವೇರಿಸಿದ್ದೇನೆ. ಇನ್ನಿತರ ಸಮಸ್ಯೆಗಳಿಗೂ, ಸ್ಪಂಧಿಸುವ ಮೂಲಕ ಗ್ರಾಮವನ್ನು ಸ್ವಚ್ಛ, ಸುಂದರವಾಗಿ ಕಂಗೊಳಿಸುವಂತೆ ಮಾಡುತ್ತೇನೆ ಎಂದರು.

ಗ್ರಾಮದ ಮುಖಂಡರಾದ ಮಹದೇವಪುರ ವೀರೇಶ್, ದಿನ್ನೆ ಮಲ್ಲಿಕಾರ್ಜುನ, ಬೊಮ್ಮಣ್ಣ, ವೆಂಕಟೇಶ್, ಓಬಣ್ಣ, ಬಸಣ್ಣ, ಗುರುಸ್ವಾಮಿ, ಚಿದಾನಂದಪ್ಪ, ಉಮೇಶ್ ಹಾಲಸಾಗರ ಮಾಜಿ ತಾಪಂ ಉಪಾಧ್ಯಕ್ಷ ಮಂಜುನಾಥ್, ಗ್ರಾಪಂ ಅಧ್ಯಕ್ಷ ಜಯಣ್ಣ, ಮಾರೇಶ್, ಎಸ್ಡಿಎಂಸಿ ಅಧ್ಯಕ್ಷರು, ಸದಸ್ಯರು, ಭೂಮಿಕಾ, ಜಿ.ನಾಗೇಂದ್ರಪ್ಪ, ಗುಡೇಕೋಟೆ ಗ್ರಾಪಂ ಅಧ್ಯಕ್ಷ ಎನ್.ಕೃಷ್ಣ, ಕೆ.ರಾಘವೇಂದ್ರರಾವ್, ವಿಶಾಲಕ್ಷಿ, ಶಿವರಾಜ್ ವರ್ಮ, ಜ್ಯೋತಿಗೌಡ, ಪಿಡಬ್ಲೂಡಿ ಎಇಇ ನಾಗನಗೌಡ, ಜಿಪಂ ಎಇಇ ಮಲ್ಲಿಕಾರ್ಜುನ, ಪಿಆರ್‌ಡಿಎಲ್ ಶಂಕರ್‌ನಾಯ್ಕ್, ಹಾಗೂ ಇತರೆ ಗ್ರಾಮಸ್ಥರು ಇದ್ದರು. ನಂತರ, ಗುಡೇಕೋಟೆ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ನೂತನ ಕೊಠಡಿಗಳ 119 ಲಕ್ಷಗಳ ಕಾಮಗಾರಿಗೆ, ಅಂಗನವಾಡಿ ಕೇಂದ್ರ ಕಟ್ಟಡ ನಿರ್ಮಾಣಕ್ಕೆ 20 ಲಕ್ಷ ಕಾಮಗಾರಿಗೆ, ಕಸಾಪುರದಿಂದ ಗುಡೇಕೋಟೆ–ಹಾನಗಲ್ ಮುಖ್ಯ ರಸ್ತೆಯವರೆಗೆ ಡಾಂಬರೀಕರಣಕ್ಕೆ 54 ಲಕ್ಷ ಕಾಮಗರಿಗಳಿಗೆ ಶಾಸಕ ಎನ್.ಟಿ. ಶ್ರೀನಿವಾಸ್ ಭೂಮಿ ನೆರವೇರಿಸಿದರು.

# ಮಹಿಳೆಯರಿಗೆ ಸರ್ಕಾರ ಯೋಜನೆಗಳು ತಲುಪಿಸಿ

## ತಾಪಂ ಇಒ ಆರ್.ಕೆ.ಶ್ರೀಕುಮಾರ್ ಹೇಳಿಕೆ | ಪ್ರಗತಿ ಪರಿಶೀಲನಾ ಸಭೆ



■ ಹಂಪಿ ಟೈಮ್ಸ್ ಕಂಪ್ಲಿ

ಮಹಿಳೆಯರ ಸ್ವಾವಲಂಬಿ ಜೀವನ ಸಾಧನೆಗೆ ಸರ್ಕಾರ ಕಲ್ಪಿಸಿರುವ ಯೋಜನೆ ಗಳನ್ನು ನಿಗಧಿತ ಅವದಿಯೊಳಗೆ ಅರ್ಹ ಫಲಾನುಭವಿಗಳಿಗೆ ತಲುಪಿಸುವಲ್ಲಿ ಜಾಗೃತಿ ತೋರಬೇಕು ಎಂದು ತಾಪಂ ಇಒ ಆರ್. ಕೆ.ಶ್ರೀಕುಮಾರ್ ಹೇಳಿದರು.

ಇಲ್ಲಿನ ತಾಪಂ.ಆವರಣದಲ್ಲಿ ಗುರುವಾರ ನಡೆದ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮೀಷನ್ (ಎನ್.ಆರ್.ಎಲ್.ಎಂ) ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಬಡ ಕುಟುಂಬಗಳಿಗೆ ಲಾಭದಾಯಕ ಸ್ವಉದ್ಯೋಗ, ಕೌಶಲ ಪೂರ್ಣ ಆದಾಯತರುವ ಉದ್ಯೋಗಾವ ಕಾಶಗಳನ್ನು ಒದಗಿಸಲು ಗ್ರಾಮೀಣ ಪ್ರದೇಶದಲ್ಲಿ 467ಮಹಿಳಾ ಸ್ವಸಹಾಯ ಸಂಘಗಳ ರಚನೆ ಗುರಿ ನೀಡಿದೆ. ಇದರಲ್ಲಿ 224ಸಂಘ ರಚಿಸಿದ್ದು ಉಳಿದ ಗುರಿ ಸಾಧಿಸುವಲ್ಲಿ ಮುಂದಾಗಬೇಕು. ಮಹಿಳೆ ಯರಿಗೆ ಬ್ಯಾಂಕ್ ಲಿಂಕ್ಡ್ ಯೋಜನೆ, ಸಾಲ, ತರಬೇತಿ, ನಾನಾ ಇಲಾಖೆಗಳ ಒಗ್ಗೂಡು ವಿಕೆಯ ಕಾರ್ಯಕ್ರಮಗಳನ್ನು ತಲುಪಿಸುವಲ್ಲಿ ಶೇ.100ರಷ್ಟು ಗುರಿ ಸಾಧಿಸಬೇಕು. ನರೇಗಾದಲ್ಲಿ 100ದಿನ ಉದ್ಯೋಗ ಸಾಧಿಸಿದ ಕಾರ್ಮಿಕರಿಗೆ ಉನ್ನತಿ ಯೋಜನಡಿ ಜೀವನೋಪಾ ಯಕ್ಕಾಗಿ ಕೌಶಲ ತರಬೇತಿ, ಬಳ್ಳಾರಿಯ ಕೆನರಾ ಬ್ಯಾಂಕ್ ಗ್ರಾಮೀಣ ಅಭಿವೃದ್ಧಿ ತರಬೇತಿ ಸಂಸ್ಥೆಯಿಂದ ಮಹಿಳೆಯರಿಗೆ ಆಸಕ್ತಿಗೆ ಅನುಗುಣವಾದ ಸ್ವಉದ್ಯೋಗ ತರಬೇತಿ ನೀಡುವ ಯೋಜನೆಗಳನ್ನು ಅರ್ಹರಿಗೆ ಮುಟ್ಟಿಸುವಂತೆ ಸಲಹೆ ನೀಡಿದರು.

ಸಭೆಯಲ್ಲಿ ಮುಖ್ಯಪುಸ್ತಕ ಬರಹಗಾರರು, ಸಂಪನ್ಮೂಲವ್ಯಕ್ತಿಗಳು, ಕೃಷಿ ಸಖಿ, ಪಶುಸಖಿ, ಹಣಕಾಸು ಸಾಕ್ಷರತೆ ವ್ಯಕ್ತಿಗಳು ಪಾಲ್ಗೊಂಡಿದ್ದು ತಮ್ಮ ಸಮಸ್ಯೆ, ಸಾಧಕ ಬಾಧಕಗಳನ್ನು ಸಭೆಯಲ್ಲಿ ಪ್ರಸ್ತಾಪಿಸಿದರು.

ಎನ್.ಆರ್.ಎಲ್.ಎಂ.ತಾಲೂಕು ವ್ಯವಸ್ಥಾಪಕಿ ಎನ್.ಪಾರ್ವತಿ, ಎಡಿಪಿಆರ್ ಅಪರಂಜಿ, ಜಿಪಂ.ಡಿಎಂಐಎಸ್ ಮಾರೇಶ್, ನಾರಿ(ಕ್ಲಿಪ್) ಯೋಜನೆಯ ಜಿಲ್ಲಾ ಸಂಯೋಜಕ ಈರಣ್ಣ,

ಎಬಿಪಿ ಸಂಯೋಜಕ ಬಸವನಗೌಡ, ರಾಜೀವ್‌ಗಾಂಧಿ ಫೆಲೋಶಿಪ್ ಯೋಜನೆಯ ಅಧಿಕಾರಿ ಸಲ್ಮಾ ತಾಲೂಕು ಒಕ್ಕೂಟದ ಅಧ್ಯಕ್ಷೆ ರೇಣುಕಮ್ಮ, ಕಾರ್ಯದರ್ಶಿ ಪುಷ್ಪಾವತಿ, ಗ್ರಾಪಂ.ಗಳ ಒಕ್ಕೂಟದ ಅಧ್ಯಕ್ಷರು ಇತರರಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ



ಹಂಪಿ ಉತ್ಸವ
ಫೆ.28, ಮಾ.1-2 | 2025
ಉತ್ಸವ ಹೇಗಿರಬೇಕು?
ನೀವು ಬರೆದು ಕಳುಹಿಸಿ

ಹಂಪಿ ಉತ್ಸವದ ರೂವಾರಿ ದಿ.ಎಂ.ಪಿ.ಪ್ರಕಾಶ ಅವರ ಆಶಯದಂತೆ ಹಂಪಿ ಉತ್ಸವ ಆಚರಿಸಲು ಜಿಲ್ಲಾ ಉಸ್ತುವಾರಿ ಸಚಿವ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಉತ್ಸುಕರಾಗಿದ್ದಾರೆ. ಅದಕ್ಕೆ ಪೂರಕವಾಗಿ ಈಬಾರಿಯ ಹಂಪಿ ಉತ್ಸವ ಆಚರಣೆಗೆ ಈಗಾಗಲೇ ಜಿಲ್ಲಾಡಳಿತದಿಂದ ಸಿದ್ಧತೆಗಳು ಚುರುಕುಗೊಂಡಿರುವುದು ಹೆಮ್ಮೆಯ ಸಂಗತಿ.



ವಿಜಯನಗರ ಸಾಮ್ರಾಜ್ಯದ ವೈಭವವನ್ನು ಕಂಡಿದ್ದ ಅಂದಿನ ಅನೇಕ ವಿದೇಶಿಗರು ಪುಸ್ತಕಗಳಲ್ಲಿ ದಾಖಲಿಸಿದ್ದಾರೆ. ಉತ್ಸವಗಳು ಕೇವಲ ಆಚರಣೆಗೆ ಸೀಮಿತಗೊಳ್ಳದೆ ಇತಿಹಾಸದ ಪುಟಗಳಲ್ಲಿ ದಾಖಲಾಗುವಂತೆ ಅರ್ಥಪೂರ್ಣ ಆಚರಣೆಗೆ ನಿಮ್ಮ ಅಮೂಲ್ಯ ಅಭಿಪ್ರಾಯಗಳನ್ನು ಬರೆದು ಹಂಪಿ ಟೈಮ್ಸ್‌ಗೆ ಕಳುಹಿಸಿಕೊಡಿ, ನಿಮ್ಮ ಆಯ್ದ ಅಭಿಪ್ರಾಯಗಳು, ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಹಂಪಿ ಉತ್ಸವ ಅರ್ಥಪೂರ್ಣ ಆಚರಣೆಗೆ ನಿಮ್ಮಅಮೂಲ್ಯ ಸಲಹೆ, ಅಭಿಪ್ರಾಯಗಳು ಜಿಲ್ಲಾಡಳಿತಕ್ಕೆ ಸಮಂಜಸವೆನಿಸಿದರೆ ಆಯ್ಕೆ ಮಾಡಿಕೊಳ್ಳಲುಬಹುದು. ಇಂದೇ ನಿಮ್ಮ ಅಭಿಪ್ರಾಯಗಳನ್ನು ಪತ್ರಿಕೆಯ ಇ-ಮೇಲ್ ಗೆ ಕಳುಹಿಸಿರಿ.

www.hampitimes.com
epaper.hampitimes.com
hampitimes@gmail.com
@hampitimes
9448633038

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ Print & Digital News Paper
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...
ಹಂಪಿ ಟೈಮ್ಸ್ ಇ-ಪೇಪರ್
ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ದಿನಪತ್ರಿಕೆ ಇರಲಿ.
ಡಿ..ವಿ.ಜಿ.



## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 16–01–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1622.38 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 12002 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 68.261 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1588.93 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 10.159 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

17–01–2025 –ಶುಕ್ರವಾರ

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಮಾಘಾ |
| ಯೋಗ | : ಸೌಭಾಗ್ಯ |
| ಕರಣ | : ಭವ |
| ಸೂರ್ಯೋದಯ | : 07:11:35 |
| ಸೂರ್ಯಾಸ್ತ | : 18:02:47 |
| ರಾಹು ಕಾಲ | : 11:16–12:37 |
| ಯಮಘಂಡ ಕಾಲ | : 15:20–16:41 |
| ಗುಳಿಕ ಕಾಲ | : 08:33–09:54 |

# ಸರ್ಕಾರಿ ಆಸ್ಪತ್ರೆ ಸುತ್ತಮುತ್ತ 20ಕ್ಕೂ ಅಧಿಕ ಖಾಸಗಿ ಔಷಧಿ ಮಳಿಗೆಗಳು

### ಕರ್ನಾಟಕ ಉಪ ಲೋಕಾಯುಕ್ತ ಬಿ.ವೀರಪ್ಪ ಬಳ್ಳಾರಿ ಜಿಲ್ಲಾ ಆಸ್ಪತ್ರೆಗೆ ಭೇಟಿ ಪರಿಶೀಲನೆ। ಅಸಮಾಧಾನ





■ ಹಂಪಿ ಟೈಮ್ಸ್ ಬಳ್ಳಾರಿ

ಕರ್ನಾಟಕ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಗುರುವಾರ ನಗರದ ಜಿಲ್ಲಾ ಆಸ್ಪತ್ರೆ ಮತ್ತು ಬಿಮ್ಸ್ ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತುರ್ತು ಚಿಕಿತ್ಸಾ ವಿಭಾಗ, ಔಷಧಿ ವಿತರಣಾ ವಿಭಾಗ, ಓಬಿಜಿ ವಾರ್ಡ್ ಸೇರಿದಂತೆ ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿ ಅಲ್ಲಿನ ಸ್ಥಿತಿ–ಗತಿ ಪರಿಶೀಲಿಸಿದರು. ವಿವಿಧ ವಾರ್ಡ್‌ಗಳಿಗೆ ದಾಖಲಾಗಿದ್ದ ರೋಗಿಗಳ ಆರೋಗ್ಯ ವಿಚಾರಿಸಿದರು. ರೋಗಿಗಳಿಗೆ ಗುಣಮಟ್ಟ ಸೇವೆ ನೀಡಬೇಕು ಎಂದು ಅಲ್ಲಿನ ಕರ್ತವ್ಯ ನಿರತ ವೈದ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿದರು.

**ಅವಧಿ ಮೀರಿದ ಔಷಧಿಗಳನ್ನು ವಿತರಿಸುವಂತಿಲ್ಲ:** ಜಿಲ್ಲಾ ಆಸ್ಪತ್ರೆ, ಬಿಮ್ಸ್ ಸೇರಿದಂತೆ ಯಾವುದೇ ಆಸ್ಪತ್ರೆಗಳಲ್ಲಿ ಅವಧಿ ಮೀರಿದ ಔಷಧಿ, ಶಸ್ತ್ರ ಚಿಕಿತ್ಸಕ ವಸ್ತುಗಳನ್ನು ಯಾವುದೇ ಕಾರಣಕ್ಕೂ ವಿತರಿಸುವಂತಿಲ್ಲ ಮತ್ತು ಬಳಸುವಂತಿಲ್ಲ ಎಂದು ಜಿಲ್ಲಾ ಆಸ್ಪತ್ರೆ ಮತ್ತು ಬಿಮ್ಸ್ ಔಷಧಿ ವಿತರಣಾ ವಿಭಾಗದ ವೈದ್ಯಾಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.


**ಔಷಧಿಗೆ ಹೊರಗಡೆ ಶಿಫಾರಸ್ಸು ಮಾಡುವಂತಿಲ್ಲ;** ಆಸ್ಪತ್ರೆಯಲ್ಲಿ ದಾಖಲಾದ ರೋಗಿಗಳಿಗೆ ಔಷಧಿಗಾಗಿ ಹೊರಗಡೆ ಶಿಫಾರಸ್ಸು ಮಾಡುವಂತಿಲ್ಲ, ಆಸ್ಪತ್ರೆಯಿಂದಲೇ ವಿತರಿಸುವಂತೆ ಸರ್ಕಾರದ ಸುತ್ತೋಲೆ ಇದ್ದು, ಸಾರ್ವಜನಿಕರು ಹೊರಗಡೆಯಿಂದ ಖರೀದಿಸಿ ತಂದಿರುವುದು ಕಂಡುಬಂದಿದೆ. ಈ ಕುರಿತು ಶಿಫಾರಸ್ಸು ಮಾಡಿದ ವೈದ್ಯಾಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಬೇಕು ಎಂದು ಬಿಮ್ಸ್ ನಿರ್ದೇಶಕರಿಗೆ ಸೂಚಿಸಿದರು.

ಇದರಿಂದಾಗಿಯೇ ಬಿಮ್ಸ್ ಆಸ್ಪತ್ರೆಯ ಸುತ್ತಲೂ 20 ಕ್ಕೂಹೆಚ್ಚುಔಷಧಿಮಳಿಗೆಗಳುಸುತ್ತುವರೆದುಕೊಂಡಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

**ಆತ್ಮಸ್ಥೈರ್ಯ ತುಂಬಿರಿ:** ಆಸ್ಪತ್ರೆಗೆ ಬರುವ ವಿವಿಧ ರೀತಿಯ ರೋಗಿಗಳಿಗೆ ಆತ್ಮಸ್ಥೈರ್ಯ ತುಂಬಬೇಕು. ಸಣ್ಣ ಪುಟ್ಟ ರೋಗಕ್ಕೂ ಅವರಿಗೆ ಇನ್ನಷ್ಟು ನಿಶ್ಯಕ್ತರಾಗುವಂತೆ ಮಾಡ ಬಾರದು. ಸೊಪ್ಪು ತರಕಾರಿ–ಪಲ್ಯ ಸೇವಿಸುವಂತೆ ಯೋಗ–ನಿಯಮಿತ ವ್ಯಾಯಾಮ ಮಾಡುವಂತೆ ಸಲಹೆ ಮಾಡಬೇಕು ಎಂದು ಸೂಚಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭರಾಣಿ.ವಿ.ಜೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಕೆ.ಎಂ. ರಾಜಶೇಖರ್, ಸಹಾಯಕ ನಿಬಂಧಕರಾದ ಶುಭವೀರ್ ಜೈನ್.ಬಿ., ಉಪ ನಿಬಂಧಕರಾದ ಅರವಿಂದ.ಎನ್.ವಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಯೂ ಆದ ರಾಜೇಶ್ ಎನ್.ಹೊಸಮನೆ, ಬಳ್ಳಾರಿ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿ.ಸಿದ್ದರಾಜು, ಡಿವೈಎಸ್ಪಿ ವಸಂತ ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಬಸರೆಡ್ಡಿ, ಬಿಮ್ಸ್ ನಿರ್ದೇಶಕ ಡಾ.ಗಂಗಾಧರ ಗೌಡ ಸೇರಿದಂತೆ ಬಳ್ಳಾರಿ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು, ವೈದ್ಯಾಧಿಕಾರಿಗಳು ಹಾಗೂ ಮತ್ತಿತರರು ಹಾಜರಿದ್ದರು.

## ಆನಂದ ಬಾಣ




## ಜ.17 ಶ್ರೀಪುರಂದರದಾಸರ ಆರಾಧನೋತ್ಸವ ಆಚರಣೆ ಪೂರ್ವಸಿದ್ಧತಾ ಸಭೆ.

■ ಹಂಪಿ ಟೈಮ್ಸ್ ಹೊಸಪೇಟೆ

ಶ್ರೀಪುರಂದರದಾಸರ ಆರಾಧನೋತ್ಸವ ಆಚರಣೆ ನಿಮಿತ್ತ ಜ.17 ರಂದು ಪೂರ್ವಸಿದ್ದತಾ ಸಭೆಯನ್ನು ಏರ್ಪಡಿಸಲಾಗಿದೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ. 2024–25 ನೇ ಸಾಲಿನ ಶ್ರೀಪುರಂದರ ದಾಸರ ಆರಾಧಾನೋತ್ಸವ ಆಚರಣೆ ನಿಮಿತ್ತ ಪೂರ್ವಸಿದ್ದತೆಗಳನ್ನು ಮಾಡಿಕೊಳ್ಳಲು ಜ.17 ರಂದು ಜಿಲ್ಲಾಧಿಕಾರಿಗಳ ಕಾರ್ಯಾಲಯ ಸಭಾಂಗಣದಲ್ಲಿ ಮದ್ಯಾಹ್ನ 12 ಗಂಟೆಗೆ ಸಭೆ ಹಮ್ಮಿಕೊಳ್ಳಲಾಗಿದೆ. ಈ ಸಭೆಯಲ್ಲಿ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ತಪ್ಪದೇ ಸಭೆಯಲ್ಲಿ ಹಾಜರಿರಬೇಕೆಂದು ಎಂದು ತಿಳಿಸಿದ್ದಾರೆ.

## ಜ.20 ಜಿಲ್ಲಾ ಮಟ್ಟದ ಸಿರಿಧಾನ್ಯ ನಡಿಗೆ

■ ಹಂಪಿ ಟೈಮ್ಸ್ ಬಳ್ಳಾರಿ

ಅಂತರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳದ ಅಂಗವಾಗಿ ಜಿಲ್ಲಾ ಮಟ್ಟದಲ್ಲಿ ಅರಿವು ಮೂಡಿಸಲು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಕೃಷಿ ಇಲಾಖೆ ಸಹಯೋಗದೊಂದಿಗೆ ಜ.20 ರಂದು ಸಿರಿಧಾನ್ಯ ನಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಮಟ್ಟದ ಸಾವಯವ ಮತ್ತು ಸಿರಿಧಾನ್ಯಗಳ ಹಬ್ಬ ಕಾರ್ಯಕ್ರಮವನ್ನು ಜ.21 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಡಾ. ರಾಜ್‌ಕುಮಾರ್ ರಸ್ತೆಯ ಮುನಿಸಿಪಾಲ್ ಕಾಲೇಜ್ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

# ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಹೆಚ್ಚು ಅಂಕಪಡೆದ ರಮೇಶ್ ಕಂಬತ್ತಳ್ಳಿಗೆ ಲ್ಯಾಪ್‌ಟಾಪ್ ವಿತರಣೆ

■ ಹಂಪಿ ಟೈಮ್ಸ್ ಕೊಟ್ಟೂರು

ಪಟ್ಟಣದ ಯುವಿ ಫೈನಾನ್ಸ್ ಕಂಪನಿ ಏರ್ಪಡಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ವಿದ್ಯಾರ್ಥಿ ಕಂಬತ್ತಳ್ಳಿ ರಮೇಶ್ ಹೆಚ್ಚು ಅಂಕಗಳನ್ನು ಪಡೆದು "ಲ್ಯಾಫ್‌ಟಾಪ್" ಹಾಗೂ 'ಸ್ಪರ್ಧಾತ್ಮಕ ಪುಸ್ತಕಗಳ"ನ್ನು ತಮ್ಮದಾಗಿಸಿಕೊಂಡಿದ್ದಾರೆ.

ಕೊಟ್ಟೂರಿನ ಉಜ್ಜಿನಿ ರಸ್ತೆಯಲ್ಲಿರುವ ಯುವಿ ಫೈನಾನ್ಸ್ ಕಂಪನಿಯ ಮಾಲಿಕರು ಸಾಯಿ ಕುಮಾರ ಮಾತನಾಡಿ, ತಾಲೂಕಿನ ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಹಾಗೂ ಸ್ಪರ್ಧಾತ್ಮಕವಾಗಿ ಪ್ರೋತ್ಸಹಿಸಬೇಕೆನ್ನುವ ಉದ್ದೇಶದಿಂದ ಈ ಸ್ಪರ್ಧಾತ್ಮಕ ಪರೀಕ್ಷೆಯನ್ನು ಏರ್ಪಡಿಸಲಾಗಿದೆ ಎಂದರು.

ಸ್ಪರ್ಧೆಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದು ಅದರಲ್ಲಿ ಕಂಬತ್ತಳ್ಳಿ




ರಮೇಶ್ ಹೆಚ್ಚು ಅಂಕ ಪಡೆದ ಹಿನ್ನೆಲೆ ಕಂಪನಿ ವತಿಯಿಂದ 35 ಸಾವಿರ ರೂ.ಲ್ಯಾಫ್ ಟ್ಯಾಫ್ ಹಾಗೂ ಹೆಚ್ಚಿನ ಜ್ಞಾನಕ್ಕಾಗಿ ಸ್ಪರ್ಧಾತ್ಮಕ ಪುಸ್ತಕಗಳನ್ನು ನೀಡಿ ಗೌರವಿಸಲಾಗಿದೆ ಎಂದು ತಿಳಿಸಿದರು.

ಈ ರೀತಿಯ ಸ್ಪರ್ಧೆಯನ್ನು ಯುವಿ ಫೈನಾನ್ಸ್ ಒಮ್ಮೆ ಮಾತ್ರ ನಡೆಸಿ ಕೈಬಿಡುವುದಿಲ್ಲ, ತಾಲೂಕಿನ ವಿದ್ಯಾರ್ಥಿಗಳನ್ನು ಉನ್ನತ ಹುದ್ದೆಗೆ ಕಳಿಸುವ ಚಿಂತನೆಯಲ್ಲಿ ಮತ್ತೆ ಮತ್ತೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲಾ ಗುವುದು ಎಂದರು.

ಸ್ಪರ್ಧಾ ವಿಜೇತ ರಮೇಶ ಕಂಬತ್ತಳ್ಳಿಯನ್ನು ಬೆಳ್ಳಿ ಸರೋಟದಲ್ಲಿ ಕುಳಿಸಿ, ಮಂಗಳವಾದ್ಯ ಗಳೊಂದಿಗೆ ಪಟ್ಟಣದಲ್ಲಿ ಮೆರವಣಿಗೆ ಕೈಗೊಳ್ಳಲಾಯಿತು. ಈ ಸಂದರ್ಭದಲ್ಲಿ ಬಸವರಾಜ, ಅಡಿವೆಪ್ಪ ಸಿಬ್ಬಂದಿ ಸೇರಿದಂತೆ ವಿದ್ಯಾರ್ಥಿಗಳು, ಪೋಷಕರು ಹಾಜರಿದ್ದರು.

# ಬಾಲ್ಯವಿವಾಹ ತಡೆದು ಶಿಕ್ಷಣ ಕೊಡಿಸಿ

■ ಹಂಪಿ ಟೈಮ್ಸ್ ಕೊಪ್ಪಳ

ಅಪ್ರಾಪ್ತ ವಯಸ್ಸಿನ ಬಾಲ್ಯವಿವಾಹದಿಂದ ಮಕ್ಕಳು ಗರ್ಭಿಣಿಯರು ಮತ್ತು ಬಾಲ ತಾಯಂದಿರಾಗುವುದರಿಂದ ಭವಿಷ್ಯದ ಸಮಾಜಕ್ಕೆ ಮಾರಕವಾಗಲಿದ್ದು, ತಮ್ಮ ಸುತ್ತಮುತ್ತನಡೆಯುವಬಾಲ್ಯವಿವಾಹಗಳನ್ನು ತಡೆದು ಮಗುವಿಗೆ ಶಿಕ್ಷಣ ಕೊಡಿಸಬೇಕು ಎಂದು ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ ಹೇಳಿದರು.

ಶ್ರೀ ಗವಿಸಿದ್ದೇಶ್ವರ ಜಾತ್ರಾ ನಿಮಿತ್ಯ ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಹಿಳಾ ಧ್ವನಿ ಶಿಕ್ಷಣ ಗ್ರಾಮೀಣ ಕ್ಷೇಮಾಭಿವೃದ್ಧಿ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ "ಬಾಲ್ಯವಿವಾಹ ನಿಷೇಧ ಕಾಯ್ದೆ–2006 ಮತ್ತು ಕರ್ನಾಟಕ ತಿದ್ದುಪಡಿ ಕಾಯ್ದೆ–2016ರ ಶ್ರೀ ಗವಿಸಿದ್ದೇಶ್ವರ



ಜಾತ್ರೆಯಲ್ಲಿ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಕ್ಕಳಿಗೆ ಜನಿಸುವ ಮಗುವಿನ ಬೌದ್ಧಿಕ, ದೈಹಿಕ, ಮಾನಸಿಕ, ಭಾವನಾತ್ಮಕ, ಸಾಮಾಜಿಕ ಹಾಗೂ ಭಾಷಾ ಬೆಳವಣಿಗೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದರೊಂದಿಗೆ ಮಕ್ಕಳ ಬೆಳವಣಿಗೆ ಕುಂಠಿತ ವಾಗುತ್ತದೆ ಹಾಗೂ ವಿಶೇಷ ಚೇತನ, ಅಪೌಷ್ಟಿಕ ಮಕ್ಕಳು ಜನಿಸುವ ಅಥವಾ ತಾಯಿ, ಮಗು ಅಥವಾ ಇಬ್ಬರು ಮರಣಹೊಂದುವ ಸಾಧ್ಯತೆ ಅಧಿಕವಾಗಿರುತ್ತದೆ. ಈ ಎಲ್ಲಾ ದುಷ್ಪರಿಣಾಮ ಗಳನ್ನು ತಡೆಗಟ್ಟಲು ಸರಕಾರವು ಬಾಲ್ಯವಿವಾಹ ನಿಷೇಧ ಕಾಯ್ದೆ–2006 ಮತ್ತು ಕರ್ನಾಟಕ ತಿದ್ದುಪಡಿ–2016ನ್ನು ಜಾರಿಯಲ್ಲಿ ತಂದಿರುತ್ತದೆ ಎಂದರು.

"ಕೊಪ್ಪಳ ಜಿಲ್ಲೆಯನ್ನು ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸಲು" ಹಲವಾರು ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, "ಬಾಲ್ಯವಿವಾಹಕ್ಕೆ ಸಿದ್ಧತೆ ಅಥವಾ ಪ್ರಯತ್ನಿಸಿದರೂ ಸಹ ಪ್ರಕರಣ ದಾಖಲಿಸುವಂತೆ ಕೊಪ್ಪಳ ಜಿಲ್ಲಾಧಿಕಾರಿಗಳು ಸೂಚಿಸಿರುತ್ತಾರೆ. ಅಪ್ರಾಪ್ತ ವಯಸ್ಸಿನ ಮಕ್ಕಳ ಮದುವೆ ದಿನ ನಿಶ್ಚಯ ಮಾಡುವುದು, ಹುಡುಗನಿಗೆ – ಹುಡುಗಿಯನ್ನು ನಿಶ್ಚಯಿಸಿದ್ದಲ್ಲಿಯೂ ಸಹ ಪ್ರಕರಣವನ್ನು ದಾಖಲಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರ

## ಪುರಸಭಾ ಕಾರ್ಯಾಲಯ ಹಗರಿಬೊಮ್ಮನಹಳ್ಳಿ–583212 ಜಿಲ್ಲೆ–ವಿಜಯನಗರ, ರಾಜ್ಯ–ಕರ್ನಾಟಕ

TOWN MUNICIPAL COUNCIL, HAGARIBOMMANAHALLI-583212, Dist: Vijayanagara , State: Karnataka

website: www.hagaribommanahallitown.mrc.gov.in Email: itstaff_ulb_hballi@yahoo.in Phone:08397-238358

ನಂ:ಪುಹಬೊ/ಕಂ.ವಿ/ನಿವೇಶನ/2024–25 ದಿನಾಂಕ: 16–01–2025

### –: ಸಾರ್ವಜನಿಕ ಪ್ರಕಟಣೆ :–

**ವಿಷಯ: ಹಗರಿಬೊಮ್ಮನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ನಿವೇಶನಗಳನ್ನು ವಿಲೇವಾರಿ ಮಾಡುವ ಕುರಿತು**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಗರಿಬೊಮ್ಮನಹಳ್ಳಿ ಪುರಸಭೆ ವ್ಯಾಪ್ತಿಯಲ್ಲಿ **1) ಸೈನಿಕ ಭವನ ನಿರ್ಮಾಣ ಮಾಡಲು, 2) ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣ ಮಾಡಲು, 3) ಡಿ.ದೇವರಾಜ ಅರಸು ಭವನ ನಿರ್ಮಾಣ ಮಾಡಲು , 4) ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ಕಛೇರಿ** ಕಟ್ಟಡ ನಿರ್ಮಾಣ ಮಾಡಲು ನಿವೇಶನಗಳನ್ನು ಮಂಜೂರು ಮಾಡಲು ವಿವಿಧ ಇಲಾಖೆ ಹಾಗೂ ಸಂಘ–ಸಂಸ್ಥೆಯಿಂದ ಮನವಿಗಳು ಸ್ವೀಕೃತಿಯಾಗಿದ್ದು ಈ ಕೆಳಕಂಡ ನಿವೇಶನಗಳನ್ನು ಮಾನ್ಯ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/01/ಟಿ.ಎಂ.ಡಿ/2018 ದಿನಾಂಕ:30.01.2018 ದಿನಾಂಕ:30.01.2018 ರಂತೆ 30 ವರ್ಷಗಳ ಅವಧಿಗೆ ಲೀಜ್ ಆಧಾರದ ಮೇಲೆ ವಿಲೇವಾರಿ ಮಾಡಲು ದಿನಾಂಕ:02.12.2024 ರಂದು ನಡೆದ ಸಾಮಾನ್ಯ ಸಭೆಯಲ್ಲಿ ವಿಷಯ ಮಂಡಿಸಿದ್ದು ಠರಾವು ಸಂಖ್ಯೆ:03 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ. ಆದ್ದರಿಂದ ಈ ಕೆಳಕಂಡ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ನಿವೇಶನಗಳನ್ನು ವಿಲೇವಾರಿ ಮಾಡುವ ಕುರಿತು ಆಕ್ಷೇಪಣೆ ಇದ್ದಲ್ಲಿ 30 ದಿನಗಳೊಳಗೆ ಸ್ಪಷ್ಟ ಲಿಖಿತ ರೂಪದಲ್ಲಿ ಮುಖ್ಯಾಧಿಕಾರಿಗಳು ಪುರಸಭೆ ಹಗರಿಬೊಮ್ಮನಹಳ್ಳಿ ಇವರಿಗೆ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ವಿವರ ಈ ಕೆಳಗಿನಂತಿರುತ್ತದೆ.

| ಕ್ರ.ಸಂ. | ನಿವೇಶನ ಮಂಜೂರಾತಿಗಾಗಿ ಮನವಿ ಸಲ್ಲಿಸಿದವರ ವಿವರ | ವಾರ್ಡ್ ಸಂಖ್ಯೆ | ಏರಿಯಾ | ಅನುಮೋದನೆ ನೀಡಿದ ಸಿ.ಎ. ನಿವೇಶನದ ವಿವರ | ಸಿ.ಎ ನಿವೇಶನದ ವಿವರ (ಚ.ಮೀ.ಗಳಲ್ಲಿ) |
|---|---|---|---|---|---|
| 1 | ಅಧ್ಯಕ್ಷರು ಕರ್ನಾಟಕ ಮಾಜಿ ಸೈನಿಕರ ಸಂಘ ಹಗರಿಬೊಮ್ಮನಹಳ್ಳಿ ತಾಲೂಕು ಘಟಕ (ರಿ) ಸೈನಿಕ ಭವನ ನಿರ್ಮಾಣ | 03 | ಆದರ್ಶ ಶಾಲೆ ಹತ್ತಿರ | ಸ.ನಂ:839/*/ಡಿ, ವಿ:7.98 ಎಕರೆ, ಸ.ನಂ:840/*/ಬಿ/1ಬಿ, ವಿ:10.00 ಎಕರೆ, ಸ.ನಂ:840/*/ಬಿ/1ಎ ವಿ:7.93 ಎಕರೆ ಒಟ್ಟು ವಿಸ್ತೀರ್ಣ:25.91 ಎಕರೆ (ಸ್ನೇಹ ಡೆವಲಪರ್ಸ್) | 3003 ಚ.ಮೀ |
| 2 | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹಗರಿಬೊಮ್ಮನಹಳ್ಳಿ ಕಛೇರಿ ಕಟ್ಟಡ ನಿರ್ಮಾಣ | 14 | ಕೂಡ್ಲಿಗಿ ರಸ್ತೆ ಬಲ ಭಾಗ | ಸ.ನಂ:421/*/ಬಿ/14 ವಿ:5.01 (ಡಾ॥ ಎ.ಎಂ.ಎ ಸುರೇಶ್ ಕುಮಾರ್ ಇವರ ಲೇಔಟ್) | 1059.59 ಚ.ಮೀ |
| 3 | ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಹಗರಿಬೊಮ್ಮನಹಳ್ಳಿ ಡಿ. ದೇವರಾಜ ಅರಸು ಭವನ ನಿರ್ಮಾಣ | 03 | ಹಳೇ ಮುಟುಗನಹಳ್ಳಿ ರಸ್ತೆ | ಸ.ನಂ:176/*/1 ವಿ:2.76 ಎಕರೆ, ಸ.ನಂ:174/*/ಎ ವಿ:7.91 ಎಕರೆ, ಸ.ನಂ:74/*/1 ವಿ:2.31 ಎಕರೆ ಒಟ್ಟು ವಿಸ್ತೀರ್ಣ:12.98 ಎಕರೆ (ಶ್ರೀಮತಿ ಹೆಚ್ ಎಂ ವಿಜಯಕುಮಾರಿ ಇವರ ಲೇಔಟ್) | 4134.95 ಚ.ಮೀ |
| 4 | ಮಾನ್ಯ ತಹಶೀಲ್ದಾರರು ಹಗರಿಬೊಮ್ಮನಹಳ್ಳಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಛೇರಿ ಕಟ್ಟಡ ನಿರ್ಮಾಣ | 12 | ಚಿಂತ್ರಪಳ್ಳಿ | ಸ.ನಂ:326/ಡಿ ವಿ:1.74 ಎಕರೆ, ಸ.ನಂ:327/ಬಿ/2 ವಿ:2.36 ಎಕರೆ ಒಟ್ಟು ವಿಸ್ತೀರ್ಣ:4.10 ಎಕರೆ (ಶ್ರೀ ಓಬಳಾಪುರದ ದುರುಗಪ್ಪ ಇವರ ಲೇಔಟ್) | 1060.45 ಚ.ಮೀ |

ಸಹಿ/–
ಶ್ರೀ ಪ್ರಭಾಕರ ಎಂ.ಪಾಟೀಲ್,
ಕೆ.ಎಂ.ಎ.ಎಸ್ ಶ್ರೇಣಿ–1 ಮುಖ್ಯಾಧಿಕಾರಿಗಳು,
ಪುರಸಭೆ, ಹಗರಿಬೊಮ್ಮನಹಳ್ಳಿ

ಸಹಿ/–
ಶ್ರೀಮತಿ ಅಂಬಿಕಾ ದೇವೇಂದ್ರಪ್ಪ,
ಉಪಾಧ್ಯಕ್ಷರು,
ಪುರಸಭೆ, ಹಗರಿಬೊಮ್ಮನಹಳ್ಳಿ

ಸಹಿ/–
ಶ್ರೀ ಎಂ.ಮರಿರಾಮಪ್ಪ,
ಅಧ್ಯಕ್ಷರು,
ಪುರಸಭೆ, ಹಗರಿಬೊಮ್ಮನಹಳ್ಳಿ